ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜೊಕೊವಿಚ್ ತ್ರಿಶತಕ!

ನೊವಾಕ್ ಜೊಕೊವಿಚ್ 2026ರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ಅವರ ವಿರುದ್ಧ ಗೆಲುವು ಸಾಧಿಸಿ 3 ಗ್ರ್ಯಾನ್ ಸ್ಲಾಮ್‌ಗಳಲ್ಲಿ ನೂರಕ್ಕಿಂತ ಹೆಚ್ಚು ಪಂದ್ಯ ಗೆದ್ದ ಸಾಧನೆ ಮಾಡಿದ್ದಾರೆ. ಈ ಮೊದಲು ವಿಂಬಲ್ಡನ್ ಮತ್ತು ಫ್ರೆಂಚ್ ಓಪನ್ ನಲ್ಲಿ ಜೊಕೊವಿಚ್ ಈ ಸಾಧನೆ ಮೆರೆದಿದ್ದರು.

ಸೊಂಪಾದ ಪುಟಗಳು

ರಾಗಾ ಅಂತರದ ಹಿಂದಿರುವ ಲೆಕ್ಕಾಚಾರವೇನು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಇವತ್ತಿನ ಬದುಕು ಸ್ಯಾಕರಿನ್‌ನಂತೆ, ಸಿಹಿಯುಂಟು ಶಕ್ತಿಯಿಲ್ಲ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 6

ದಾರಿದೀಪೋಕ್ತಿ

ಇತರರು ನಿಮ್ಮ ಮೇಲೆ ಇಟ್ಟಿರುವ ನಂಬಿಕೆಗಿಂತ, ನಿಮ್ಮ ಸಾಮರ್ಥ್ಯದ ಮೇಲೆ ನಿಮಗಿರುವ ಆತ್ಮವಿಶ್ವಾಸ ದೊಡ್ಡದಾಗಿರಬೇಕು. ಬೀಳುವುದರಲ್ಲಿ ಸೋಲಿಲ್ಲ, ಬಿದ್ದ ಮೇಲೆ ಮತ್ತೆ ಏಳಲು ನಿರಾಕರಿಸುವುದೇ ಅಸಲಿ ಸೋಲು.

ವಕ್ರತುಂಡೋಕ್ತಿ



ಈ ಕಾಲದಲ್ಲಿ ಎಲ್ಲರಿಗೂ ಸ್ಟೇಟಸ್ ಅನ್ನೋದು ಇರುತ್ತದೆ, ಆದರೆ ಅದು ಅನೇಕರಿಗೆ ವಾಟ್ಸಪ್‌ನಲ್ಲಿರುತ್ತದೆ

ಹೊಸೂರು ವಿಮಾನ ನಿಲ್ದಾಣಕ್ಕೆ ರೆಡ್ ಸಿಗ್ನಲ್

ಚೆನ್ನೈ: ಹೊಸೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಬೇಕೆಂಬ ತಮಿಳುನಾಡು ಸರಕಾರದ ಮನವಿಯನ್ನು ರಕ್ಷಣಾ ಸಚಿವಾಲಯ ಮತ್ತೊಮ್ಮೆ ತಿರಸ್ಕರಿಸಿದೆ. ಬೆಂಗಳೂರು ವಿಮಾನನಿಲ್ದಾಣಕ್ಕೆ ಕೇವಲ 72 ಕಿ.ಮೀ. ಹತ್ತಿರದಲ್ಲಿರುವ ಹೊಸೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವ ಮನವಿಯನ್ನು ನಾಗರಿಕ ವಿಮಾನ ಯಾನ ಸಚಿವಾಲಯ ಈ ಹಿಂದೆಯೇ ತಿರಸ್ಕರಿಸಿತ್ತು. ಇದೀಗ ಹಿಂದೂಸ್ತಾನ್ ಏರೋನಾಟಿಕ್ ಲಿಮಿಟೆಡ್ (ಎಚ್‌ಎಎಲ್) ನಿಯಂತ್ರಣದಲ್ಲಿರುವ ಈ ವಾಯುಪ್ರದೇಶದಲ್ಲಿ ಹೊಸ ವಿಮಾನ ನಿಲ್ದಾಣ ಸ್ಥಾಪಿಸುವುದರಿಂದ ರಕ್ಷಣಾ ಕಾರ್ಯಾಚರಣೆ ಮತ್ತು ತರಬೇತಿಗೆ ಅಡ್ಡಿಯಾಗಬಹುದು ಎಂದು ರಕ್ಷಣಾ ಸಚಿವಾಲಯ ಅನುಮತಿ ನಿರಾಕರಿಸಿದೆ. ಏಕೆಂದರೆ,ಈ ಮೊದಲು, ಬೆಂಗಳೂರು ವಿಮಾನ ನಿಲ್ದಾಣದಿಂದ ಹೊಸೂರು 150 ಕಿ.ಮೀ.ಗಿಂತ ಕಡಿಮೆ ಅಂತರದಲ್ಲಿದೆ. ಒಪ್ಪಂದದ ಪ್ರಕಾರ 20 ವರ್ಷಗಳ ಅವಧಿಗೆ ಈ ಅಂತರದಲ್ಲಿ ಹೊಸ ವಿಮಾನ ನಿಲ್ದಾಣ ಸ್ಥಾಪನೆ ಸಾಧ್ಯವಿಲ್ಲ ಎಂಬ ಕಾರಣ ನೀಡಿ ಉಡಾನ್ ಪಟ್ಟಿಯಿಂದ ಕೈಬಿಡಲಾಗಿತ್ತು.

ಜಿಮೇಲ್‌ನಲ್ಲೂ ಎಐ ತಂತ್ರಜ್ಞಾನ

ದೆಹಲಿ: ಜೆಮಿನಿ ಕೃತಕ ಬುದ್ಧಿಮತ್ತೆ (ಎಐ)ಯನ್ನು ಪರಿಚಯಿಸಿದ ಗೂಗಲ್ ಸಂಸ್ಥೆ ಇದೀಗ ಜಿಮೇಲ್‌ಗೂ ಎಐ ಅನ್ನು ಪರಿಚಯಿಸಲು ಮುಂದಾಗಿದೆ. ಇದು 3 ಶತಕೋಟಿ ಜಿಮೇಲ್ ಬಳಕೆದಾರರಿಗೆ ಸಹಾಯವಾಗಲಿದೆ ಎನ್ನಲಾಗಿದೆ. ಆದರೆ ಇದರಿಂದ ವೈಯಕ್ತಿಕ ಮಾಹಿತಿ ಸೋರಿಕೆಯಾಗುವ ಆತಂಕ ವ್ಯಕ್ತವಾಗಿದೆ. ಜಿಮೇಲ್‌ನಲ್ಲಿ ಪರಿಚಯಿಸಲು ಮುಂದಾಗಿರುವ ಈ ಎಐ, ಬಳಕೆದಾರರಿಗೆ ಹಲವು ರೀತಿಯಲ್ಲಿ ಸಹಾಯ ಮಾಡಲಿದೆ. ಜಿಮೇಲ್ ಸರ್ಚ್ ಕಾಲಂನಲ್ಲಿ ಯಾವುದೇ ಕೀವರ್ಡ್ ಅವಶ್ಯಕತೆಯಿಲ್ಲದೇ ಸುಲಭ ಭಾಷೆಯಲ್ಲಿ ಪ್ರಶ್ನೆಗಳನ್ನು ಕೇಳುವ ಅವಕಾಶವೂ ಸಿಗಲಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಡಿಸಿಎಂ ತಿನಿಸಿದ ಸ್ವೀಟನ್ನು ಬಾಯಿಂದ ತೆಗೆದು ಎಸೆದ ಸಿಎಂ

ಜಿಬಿಎ ಚುನಾವಣೆಗೆ ಮತಪತ್ರ ಬಳಸಲು ಆಯೋಗ ನಿರ್ಧಾರ
ಏಕಕಾಲಕ್ಕೆ ಸ್ಥಳೀಯ ಸಂಸ್ಥೆ ಚುನಾವಣೆಗೆ ಕೈ ನಾಯಕರ ಒಲವು
ಪಂಚಾಯಿತಿ ಚುನಾವಣೆಗಳಿಗೂ ಇವಿಎಂ ಬಳಕೆ ಸಾಧ್ಯತೆ ದೂರ

ಮತ್ತೆ ಬ್ಯಾಲೆಟ್‌ಗೆ ಮಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಲೆಕ್ಟ್ರಾನಿಕ್ ಮತಯಂತ್ರದ ಬಳಕೆ (ಇವಿಎಂ) ವಿರುದ್ಧ ಸಮರ ಸಾರಿರುವ ಕಾಂಗ್ರೆಸ್ ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಮತಪತ್ರದ ಮೂಲಕವೇ ನಡೆಸುವ ಪ್ರಸ್ತಾಪಕ್ಕೆ ರಾಜ್ಯ ಚುನಾವಣಾ ಆಯೋಗ ಅಸ್ತು ಎಂದಿದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ರಾಜ್ಯ ಸರಕಾರ, ಭವಿಷ್ಯದ ಎಲ್ಲಾ ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂ ಬದಲಿಗೆ ಮತಪತ್ರ ಬಳಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಶಿಫಾರಸು ಮಾಡಲು ನಿರ್ಧರಿಸಿತ್ತು. ಆದರೆ ಚುನಾವಣಾ ಆಯೋಗದಿಂದ ಈ ಬಗ್ಗೆ ಯಾವುದೇ ಸ್ಪಷ್ಟನೆ ಸಿಕ್ಕಿರಲಿಲ್ಲ. ಆದರೀಗ, ಜಿಬಿಎ ವ್ಯಾಪ್ತಿಯ ಮತದಾರರ ಕರಡು ಪಟ್ಟಿ ಬಿಡುಗಡೆ ಸಮಯದಲ್ಲಿ, ಮತಪತ್ರದ ಮೂಲಕವೇ ಜಿಬಿಎ ಚುನಾವಣೆ ನಡೆಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್. ಸಂಗ್ರೇಶಿ ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ಮುಂಬರಲಿರುವ ಎಲ್ಲ ಚುನಾವಣೆಗಳಲ್ಲಿಯೂ ಮತಪತ್ರದ ಮೂಲಕವೇ ಚುನಾವಣೆ ನಡೆಸುವ ಸರಕಾರದ ತೀರ್ಮಾನವನ್ನು ಆಯೋಗವೂ ಅಸ್ತು ಎಂದಿದೆ.

ಮತಪತ್ರ ಬಳಕೆಗೆ ನಿರ್ಬಂಧವಿಲ್ಲ: ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಂಗ್ರೇಶಿ, ಬ್ಯಾಲೆಟ್ ಪೇಪರ್‌ಗಳನ್ನು ಬಳಸಬಾರದು ಎಂದು ಸುಪ್ರೀಂ ಕೋರ್ಟ್ ಎಲ್ಲಿಯೂ ಹೇಳಿಲ್ಲ. ಚುನಾವಣಾ ಆಯೋಗ ಸ್ವತಂತ್ರ ಸಂಸ್ಥೆಯಾಗಿದ್ದು, ಮತಪತ್ರಗಳ ಬಳಕೆ ಆಯೋಗದ ನಿರ್ಧಾರ. ಮತಪತ್ರಗಳನ್ನು ಆರಂಭದಿಂದಲೂ ಬಳಸಲಾಗುತ್ತಿತ್ತು. ಆದರೆ ಕಳೆದ 20-30 ವರ್ಷಗಳಿಂದ ಇವಿಎಂಗಳನ್ನು ಬಳಸಲಾಗುತ್ತಿದೆ. ಮತಪತ್ರಗಳ ಬಳಕೆಯನ್ನು ಕಾನೂನು ಅಥವಾ ಸುಪ್ರೀಂ ಕೋರ್ಟ್ ಸಹ ನಿಷೇಧಿಸಿಲ್ಲ. ಆದ್ದರಿಂದ ಮತಪತ್ರ ಬಳಸುವ ನಿರ್ಧಾರಿಸಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಲೋಕಸಭೆ ಚುನಾವಣೆ ಮತ್ತು ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಇವಿಎಂ ಬಳಸಿ ಅಧಿಕಾರಕ್ಕೇರಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಆರೋಪಿಸುತ್ತಾ ಬಂದಿದ್ದಾರೆ. ಇವಿಎಂ ಬಳಕೆ ನಿಲ್ಲಿಸಿ ಮರಳಿ ಮತ ಪತ್ರ ಬಳಕೆ ಜಾರಿಗೊಳಿಸುವಂತೆ ಸಂಸತ್ತಿನಲ್ಲಿ ಇಂಡಿ ಒಕ್ಕೂಟ ಆಗ್ರಹಿಸಿದೆ. ಇದೀಗ ಈ ಆಗ್ರಹದಂತೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮತ ಪತ್ರ ಜಾರಿಯಾಗಿರುವುದು ಕಾಂಗ್ರೆಸ್ ನಿಲುವಿಗೆ ಪುಷ್ಟಿ ನೀಡಿದೆ.

ಏಕಕಾಲಕ್ಕೆ ಸ್ಥಳೀಯ ಸಂಸ್ಥೆ ಚುನಾವಣೆ?

ಮತಪತ್ರ ಬಳಕೆಯ ಬೆನ್ನಲ್ಲೇ, ಇದೀಗ ರಾಜ್ಯ ಕಾಂಗ್ರೆಸ್ ನಾಯಕರು ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಉತ್ಸಾಹದಲ್ಲಿದ್ದಾರೆ. ಈ ಬಗ್ಗೆ ಮಾತನಾಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆಸಲು ನಮ್ಮ ಸರಕಾರ ತೀರ್ಮಾನಿಸಿದೆ. ಇವುಗಳಿಗೆ ಇದ್ದ ಮೀಸಲು ಸಮಸ್ಯೆ ಬಗೆಹರಿಸಲು ಸಿಎಂ ಹಾಗೂ ಸಚಿವರು ತಿಳಿಸಿದ್ದಾರೆ. ಗ್ರಾಮ ಪಂಚಾಯಿತಿ ಚುನಾವಣೆಗಳನ್ನೂ ಪಕ್ಷದ ಚಿಹ್ನೆ ಮೇಲೆ ನಡೆಸಬೇಕು ಎಂದು ಅನೇಕರು ಸಲಹೆ ನೀಡಿದ್ದು, ನಾವಿನ್ನೂ ಆ ಬಗ್ಗೆ ತೀರ್ಮಾನ ಮಾಡಿಲ್ಲ. ಒಂದೇ ಬಾರಿಗೆ ಎಲ್ಲವನ್ನು ನಡೆಸಲು ಚಿಂತನೆ ನಡೆಯುತ್ತಿದೆ ಎಂದರು.

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮತಯಂತ್ರ ಹೊರತಾಗಿ ಮತಪತ್ರ ಬಳಸಲು ತೀರ್ಮಾನಿಸಿರುವ ಮಾಹಿತಿ ಬಂದಿದೆ. ರಾಜ್ಯ ಚುನಾವಣಾ ಆಯೋಗ ಸ್ವತಂತ್ರ ಸಂಸ್ಥೆಯಾಗಿದ್ದು, ಇದನ್ನು ತೀರ್ಮಾನಿಸುವ ಅಧಿಕಾರ ಅವರಿಗಿದೆ. ಹೀಗಾಗಿ ಇದು ಆಯೋಗಕ್ಕೆ ಬಿಟ್ಟ ವಿಚಾರ. ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗಲೇ 2020ರಲ್ಲಿ ತಂದ ಕಾನೂನಿನಲ್ಲಿ ಮತಪತ್ರ ಬಳಸಲು ಅವಕಾಶ ನೀಡಲಾಗಿದೆ. ನಾವು ಅದನ್ನು ಮುಂದುವರಿಸುತ್ತಿದ್ದೇವೆ. ಮತಪತ್ರ ಬಳಸುವುದರಲ್ಲಿ ತಪ್ಪೇನು ಇಲ್ಲ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಅಮೆರಿಕದಂತಹ ಅಭಿವೃದ್ಧಿ ಹೊಂದಿದ ದೇಶಗಳು ಸಹ ಮತಪತ್ರಗಳನ್ನು ಬಳಸುತ್ತವೆ. ಬ್ಯಾಲೆಟ್ ಪೇಪರ್ ಬಳಸಲು ಯಾರಿಂದಲೂ ಒತ್ತಡವಿರಲಿಲ್ಲ. ರಾಜ್ಯ ಚುನಾವಣೆ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಕಾನೂನಿನಲ್ಲಿ ಬ್ಯಾಲೆಟ್ ಪೇಪರ್ ಅಥವಾ ಇವಿಎಂಗಳನ್ನು ಬಳಸಿಕೊಂಡು ಚುನಾವಣೆಗಳನ್ನು ನಡೆಸಲು ಅವಕಾಶವಿದೆ. ಆಯೋಗವು ಇದನ್ನು ನಿರ್ಧರಿಸುವ ವಿವೇಚನಾಧಿಕಾರ ಹೊಂದಿದೆ.

-ಜಿ. ಎಸ್. ಸಂಗ್ರೇಶಿ , ರಾಜ್ಯ ಚುನಾವಣಾ ಆಯೋಗದ ಆಯುಕ್ತ

ಜಿಬಿಎ ವ್ಯಾಪ್ತಿಯಲ್ಲಿರುವ ಮತದಾರರ ಸಂಖ್ಯೆ (ಕರಡು)

- ಬೆಂಗಳೂರು ಪಶ್ಚಿಮ 27.25 ಲಕ್ಷ
- ಬೆಂಗಳೂರು ಉತ್ತರ 19.54 ಲಕ್ಷ
- ಬೆಂಗಳೂರು ದಕ್ಷಿಣ 17.44 ಲಕ್ಷ
- ಬೆಂಗಳೂರು ಕೇಂದ್ರ 14.25 ಲಕ್ಷ
- ಬೆಂಗಳೂರು ಪೂರ್ವ 10.41 ಲಕ್ಷ

ಡಿಜಿಪಿ ಸಮವಸ್ತ್ರದೊಂದಿಗೆ ಕಚೇರಿಯಲ್ಲೇ ರಾಸಲೀಲೆ
ರನ್ಯಾ ರಾವ್ ಪ್ರಕರಣದ ಬಳಿಕ ಮತ್ತೊಂದು ವಿವಾದ

ರಾಸಲೀಲೆ: ಡಿಜಿಪಿ ರಾವ್ ವಿರುದ್ಧ ಕ್ರಮಕ್ಕೆ ಸಿಎಂ ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡ ಬೆನ್ನಿಗೇ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ರಾಸಲೀಲೆ ವಿಡಿಯೋ ವೈರಲ್ ಆಗಿದ್ದು, ಸರಕಾರ ಮತ್ತು ಇಲಾಖೆಗೆ ಮುಜುಗರ ತಂದಿದೆ. ಈ ಹಿಂದೆ ರನ್ಯಾ ರಾವ್ ಚಿನ್ನ ಕಳ್ಳಸಾಗಾಟ ಪ್ರಕರಣದಲ್ಲಿ ಸಿಲುಕಿದ್ದ ಡಿಜಿಪಿ ರಾಮಚಂದ್ರ ರಾವ್ ಇದೀಗ ಕಚೇರಿಯಲ್ಲಿಯೇ ಮಹಿಳೆಯರನ್ನು ತಬ್ಬಿಕೊಂಡು ಸರಸ ಸಲ್ಲಾಪ ನಡೆಸಿದ ಆರೋಪಕ್ಕೆ ಗುರಿಯಾಗಿದ್ದಾರೆ.

ರಾವ್ ರಾಸಲೀಲೆಯ ವಿಡಿಯೊ ವೈರಲ್ ಆಗುತ್ತಿದ್ದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ. ಪರಮೇಶ್ವರ ಗರಂ ಆಗಿದ್ದು, ಅಧಿಕಾರಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದಾರೆ. ತಮ್ಮನ್ನು ಭೇಟಿ ಮಾಡಲು ಬಂದ ಅಧಿಕಾರಿಗೆ ಗೃಹ ಸಚಿವರು ಅವಕಾಶ ನಿರಾಕರಿಸಿದ್ದಾರೆ. ಈ ಬಳಿಕ ಡಿಜಿಪಿ ಡಾ. ರಾಮಚಂದ್ರ ರಾವ್ 10 ದಿನ ರಜೆ ಹಾಕಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ. ಈ ನಡುವೆ ಇದು ಹಳೆಯ ವಿಡಿಯೊ, ಎಐ ವಿಡಿಯೊ ಎಂದು ರಾವ್ ತಮ್ಮನ್ನು ತಾವು ಸಮರ್ಥಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿರುವ ಡಿಜಿಪಿ ಕಚೇರಿಯಲ್ಲಿ ಸಮವಸ್ತ್ರದಲ್ಲಿರುವಾಗಲೇ ಹಲವು ಮಹಿಳೆಯರ ಜೊತೆ ಡಾ.ರಾಮಚಂದ್ರರಾವ್ ರಾಸಲೀಲೆ ನಡೆಸಿರುವುದು ರಹಸ್ಯ ಕೆಮರಾದಲ್ಲಿ ರೆಕಾರ್ಡ್ ಆಗಿದೆ. ಕಚೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಹಿಳೆಯರನ್ನು ತಬ್ಬಿಕೊಂಡು ಮುತ್ತು ಕೊಟ್ಟಿದ್ದಾರೆ. ನಿವೃತ್ತಿಯ ಅಂಚಿನಲ್ಲಿರುವ ಹಿರಿಯ ಅಧಿಕಾರಿಯೊಬ್ಬರ ಈ ನಡೆಯಿಂದ ಪೊಲೀಸ್ ಇಲಾಖೆಯ ಶಿಸ್ತು, ಘನತೆ, ಗೌರವಕ್ಕೆ ಧಕ್ಕೆ ಉಂಟಾಗಿದ್ದು ಸಾರ್ವಜನಿಕರು ಈ ಬಗ್ಗೆ ಮಾತನಾಡಿಕೊಳ್ಳುವಂತಾಗಿದೆ.

→ 4

ನನ್ನ ವಿರುದ್ಧ ಮಾಡಿರುವ ಪಿತೂರಿ ಇದು. ಈ ವಿಡಿಯೊವನ್ನು ಎಐ ಮೂಲಕ ಮಾಡಿ ನನ್ನ ಹೆಸರಿಗೆ ಮಸಿ ಬಳಿಯುವ ಪ್ರಯತ್ನವನ್ನು ಮಾಡಿದ್ದಾರೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸುವೆ.

-ರಾಮಚಂದ್ರ ರಾವ್, ಡಿಜಿಪಿ

ನನಗೆ ಮುಂಜಾನೆ ಈ ವಿಚಾರ ಗೊತ್ತಾಗಿದೆ. ವಿಚಾರಣೆ ಮಾಡಿಸಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇವೆ. ಕಾನೂನು ಮುಂದೆ ಯಾರೂ ದೊಡ್ಡವರಲ್ಲ. ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಕ್ರಮ ಕೈಗೊಳ್ಳುತ್ತೇವೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸ್ಪೇನ್‌ನಲ್ಲಿ ರೈಲು ಡಿಕ್ಕಿ, 21 ಸಾವು

ಮ್ಯಾಡ್ರಿಡ್: ಸ್ಪೇನ್‌ನ ದಕ್ಷಿಣ ಭಾಗದ ಅಂದಲೂಸಿಯಾ ಪ್ರದೇಶದಲ್ಲಿ ಎರಡು ಹೈಸ್ಪೀಡ್ ರೈಲುಗಳು ಮುಖಾಮುಖಿ ಡಿಕ್ಕಿ ಯಾದ ಪರಿಣಾಮ 21 ಮಂದಿ ಸಾವನ್ನಪ್ಪಿ, 70ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಸೋಮವಾರ ರಾತ್ರಿ ನಡೆದಿದೆ. ಮಲಾಗಾದಿಂದ ಮ್ಯಾಡ್ರಿಡ್‌ಗೆ ತೆರಳುತ್ತಿದ್ದ ಹೈಸ್ಪೀಡ್ ರೈಲು ಅಡಮುಝು ಬಳಿ ಹಳಿ ತಪ್ಪಿ ಮತ್ತೊಂದು ಹಳಿಗೆ ನುಗ್ಗಿದೆ. ಪರಿಣಾಮ, ಆ ಹಳಿಯಲ್ಲಿ ಬರುತ್ತಿದ್ದ ಇನ್ನೊಂದು ರೈಲು ಢಿಕ್ಕಿ ಹೊಡೆದು ಹಳಿ ತಪ್ಪಿದೆ. ದುರಂತದಲ್ಲಿ ಕನಿಷ್ಠ 21 ಮಂದಿ ಮೃತಪಟ್ಟಿದ್ದಾರೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಅಬಕಾರಿ ಇಲಾಖೆ ಲಂಚ ಪ್ರಕರಣದ ಆಡಿಯೋ ತನಿಖಾ ಸಂಸ್ಥೆಗೆ ಸಲ್ಲಿಕೆ
ಸಚಿವ ತಿಮ್ಮಾಪುರ ವಿರುದ್ಧ ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ಅಬಕಾರಿ ಇಲಾಖೆಯಲ್ಲಿ ಬಯಲಾಗಿರುವ ಲಂಚ ಪ್ರಕರಣ ಸಂಬಂಧ ಪ್ರಕರಣದ ದೂರುದಾರ ಲಕ್ಷ್ಮಿನಾರಾಯಣ್, ಸಚಿವ ಆರ್.ಬಿ. ತಿಮ್ಮಾಪುರ ಅವರ ವಿರುದ್ಧ ಲೋಕಾಯುಕ್ತಕ್ಕೆ ಮತ್ತೊಂದು ದೂರು ಸಲ್ಲಿಸಿದ್ದಾರೆ.

ಲಂಚಕ್ಕೆ ಬೇಡಿಕೆಯಿಟ್ಟ ಪ್ರಕರಣದಲ್ಲಿ ಸಚಿವರ ಪಾತ್ರದ ಕುರಿತು, ಅಬಕಾರಿ ಉಪ ಆಯುಕ್ತ (ಡಿಸಿ) ಜಗದೀಶ್ ನಾಯ್ಕ್ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ಸಹಿತ ದಾಖಲೆಗಳನ್ನು ದೂರುದಾರ ಲಕ್ಷ್ಮಿ ನಾರಾಯಣ್ ಅವರು ಲೋಕಾಯುಕ್ತಕ್ಕೆ ಸಲ್ಲಿಕೆ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಲಕ್ಷ್ಮಿ ನಾರಾಯಣ್, ಟ್ರ್ಯಾಪ್ ಆದಾಗ ಮೂವರ ಬಂಧನವಾಗಿದೆ. ಮಂತ್ರಿಯ ವರಿಗೆ ಎಷ್ಟು ಹಣ ಕೊಡಬೇಕಿದೆ ಎಂದು ಅಬಕಾರಿ ಡಿಸಿಯವರು ಬಹಿರಂಗವಾಗಿ ಪ್ರಸ್ತಾಪಿಸಿದ್ದರು. ಆದ್ದರಿಂದ ಮಂತ್ರಿಯವರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳುವಂತೆ ದೂರು ನೀಡಿದ್ದೇನೆ. ಆ ಆಡಿಯೋ ಸೇರಿದಂತೆ ಸೂಕ್ತ ದಾಖಲೆಗಳನ್ನು ಲೋಕಾಯುಕ್ತ ಎಸ್ಪಿ ಯವರಿಗೆ ನೀಡಿದ್ದೇನೆ. ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಒಂದು ವೇಳೆ ಕ್ರಮ ತೆಗೆದುಕೊಳ್ಳದಿದ್ದರೆ, ಬೇರೆ ಕಾನೂನು ಮಾರ್ಗಗಳ ಬಗ್ಗೆ ಪರಿಶೀಲಿಸುತ್ತೇವೆ ಎಂದರು.

ಡಿಸಿಎಂ ಇಂದು ದಾವೋಸ್‌ಗೆ

ಬೆಂಗಳೂರು: ವಿಶೇಷ ಅಧಿವೇಶನ ಹಾಗೂ ರಾಜಕೀಯ ಕಾರಣಗಳಿಗಾಗಿಗಾಗಿ ದಾವೋಸ್ ಪ್ರವಾಸವನ್ನು ರದ್ದುಗೊಳಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ದಾವೋಸ್‌ಗೆ ಪ್ರಯಾಣಿಸುವುದಾಗಿ ಹೇಳಿದ್ದಾರೆ.

ದೆಹಲಿಯಿಂದ ವಾಪಸಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೆಹಲಿಯಿಂದ ನನ್ನ ಪ್ರವಾಸಕ್ಕೆ ಅನುಮತಿ ಸಿಕ್ಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ತೆರಳುವಂತೆ ತಿಳಿಸಿದ್ದಾರೆ. ದಾವೋಸ್ ಸಭೆಯಲ್ಲಿ ಭಾಗವಹಿಸಬೇಕು ಎಂದು ನನಗೆ ಕರೆಗಳು ಬರುತ್ತಿವೆ. ಇದರೊಂದಿಗೆ ನಮ್ಮ ಪ್ರತಿಪಕ್ಷಗಳ ಸ್ನೇಹಿತರೂ ನನಗೆ ಇದೇ ಸಲಹೆ ನೀಡಿದ್ದಾರೆ ಎಂದರು.

ದಿಲ್ಲಿ ಪರೇಡ್‌ಗೆ ರಾಜ್ಯದ ಟ್ಯಾಬ್ಲೋ ಇಲ್ಲ

ಬೆಂಗಳೂರು: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಈ ಬಾರಿ ಕರ್ನಾಟಕದ ಸ್ತಬ್ಧಚಿತ್ರಕ್ಕೆ ಅವಕಾಶ ಸಿಕ್ಕಿಲ್ಲ ಎಂದು ತಿಳಿದುಬಂದಿದೆ.

ಈ ಬಾರಿ ಆತ್ಮನಿರ್ಭರ ಭಾರತಕ್ಕೆ ಸಿರಿಧಾನ್ಯದಿಂದ ತಂತ್ರಜ್ಞಾನದವರೆಗೆ ಕರ್ನಾಟಕದ ಸಮಗ್ರ ಕೊಡುಗೆಯನ್ನು ತಿಳಿಸುವ ಆಶಯದಲ್ಲಿ ಸ್ತಬ್ಧಚಿತ್ರವನ್ನು ಸಿದ್ಧಪಡಿಸಲಾಗಿತ್ತು. ಆದರೆ, ಈ ಸ್ತಬ್ಧಚಿತ್ರಕ್ಕೆ ಕೇಂದ್ರ ರಕ್ಷಣಾ ಇಲಾಖೆಯ ಸಮಿತಿ ಅನುಮತಿ ನೀಡದೇ ಇರುವುದರಿಂದ ವರ್ಣರಂಜಿತ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಈ ಬಾರಿ ಪಾಲ್ಗೊಳ್ಳುತ್ತಿಲ್ಲ, ಬದಲಿಗೆ ಪ್ರಗತಿ ಮೈದಾನದಲ್ಲಿ ಸ್ತಬ್ಧಚಿತ್ರ ವೀಕ್ಷಣೆಗೆ ಅನುವು ಮಾಡಿಕೊಡಲಾಗಿದೆ ಎಂದು ತಿಳಿದುಬಂದಿದೆ.

ಆತ್ಮನಿರ್ಭರ ಭಾರತದ ಹಾದಿ ಸ್ವಾವಲಂಬಿ ರಾಜ್ಯಗಳೊಂದಿಗೆ ಪ್ರಾರಂಭವಾಗುತ್ತದೆ. ಕರ್ನಾಟಕವು ಕೃಷಿ ಕೈಗಾರಿಕೆ, ನಾವೀನ್ಯತೆ ಮತ್ತು ಸಂಸ್ಕೃತಿಯಲ್ಲಿ ಸಮತೋಲಿತ ಪ್ರಗತಿ ಮೂಲಕ ರಾಷ್ಟ್ರವನ್ನು ಸಮೃದ್ಧ ಮತ್ತು ಸುಸ್ಥಿರ ಭವಿಷ್ಯದತ್ತ ಕೊಂಡೊಯ್ಯುತ್ತಿದೆ. ಆತ್ಮನಿರ್ಭರ ಭಾರತದ ದೃಷ್ಟಿಗೆ ಕರ್ನಾಟಕ ಸಮಗ್ರ ಕೊಡುಗೆ ನೀಡುತ್ತಿದೆ ಎಂಬುದು ಈ ಸ್ತಬ್ಧಚಿತ್ರದ ಸಂಕೇತವಾಗಿತ್ತು. ಕಳೆದ ಬಾರಿ ರಾಷ್ಟ್ರ ರಾಜಧಾನಿ ದೆಹಲಿಯ ಕರ್ತವ್ಯಪಥದಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಐತಿಹಾಸಿಕ ನಗರವಾದ ಲಕ್ಕುಂಡಿಯ ವೈಶಿಷ್ಟ್ಯಪೂರ್ಣ ಹಾಗೂ ಕಲಾತ್ಮಕ ದೇವಾಲಯಗಳ ಸ್ತಬ್ಧ ಚಿತ್ರ ಗಮನ ಸೆಳೆದಿತ್ತು.

ಬಿಜೆಪಿ ಅವಧಿಯಲ್ಲೂ ಆಯ್ಕೆಯಾಗಿರಲಿಲ್ಲ

ಈ ಹಿಂದೆ ಬಿಜೆಪಿ ಅವಧಿಯಲ್ಲಿಯೂ ಕರ್ನಾಟಕ ಸ್ತಬ್ಧಚಿತ್ರ ಆಯ್ಕೆಯಾಗಿರಲಿಲ್ಲ. ಆಗ ಕೇಂದ್ರ ಸರಕಾರ ರಾಜಕೀಯ ಕಾರಣಕ್ಕೆ ಕರ್ನಾಟಕದ ಟ್ಯಾಬ್ಲೋವನ್ನು ಪರಿಗಣಿಸಿಲ್ಲ ಎಂದು ಕಾಂಗ್ರೆಸ್ ಆರೋಪಿಸಿತ್ತು. 13 ವರ್ಷಗಳಿಂದ ನಿರಂತರವಾಗಿ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದ ರಾಜ್ಯದ ಸ್ತಬ್ಧಚಿತ್ರವನ್ನು ನಿರಾಕರಿಸಿದ್ದು ವಿವಾದಕ್ಕೆ ಕಾರಣವಾಗಿತ್ತು. ಬಳಿಕ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರಕಾರದೊಂದಿಗೆ ಚರ್ಚಿಸಿ, ಪ್ರದರ್ಶನಕ್ಕೆ ಅನುವು ಮಾಡಿ ಕೊಟ್ಟಿದ್ದರು.

ಇಂದು ಬಿಜೆಪಿ ಅಧ್ಯಕ್ಷರ ಅಧಿಕಾರ ಸ್ವೀಕಾರ

ದೆಹಲಿ: ಬಿಜೆಪಿ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ನಿತಿನ್ ನಬಿನ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು ಮಂಗಳವಾರ (ಜ.20) ನೂತನ ಅಧ್ಯಕ್ಷರು ಅಧಿಕಾರ ಸ್ವೀಕಾರ ಮಾಡಲಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಬೇರೆ ಯಾವುದೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದ ಕಾರಣ ನಬಿನ್ ಅವಿರೋಧವಾಗಿ ಪಕ್ಷದ 12ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜೆ.ಪಿ. ನಡ್ಡಾ ಅವರ ಸ್ಥಾನವನ್ನು ನಬಿನ್ ತುಂಬಲಿದ್ದಾರೆ.

ಹಾಲಿ ಅಧ್ಯಕ್ಷ ಜೆ.ಪಿ. ನಡ್ಡಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಸಾರಿಗೆ ಸಚಿವ ನಿತಿನ್ ಗಡ್ಕರಿ, ಹಿರಿಯ ನಾಯಕರಾದ ಧರ್ಮೇಂದ್ರ ಪ್ರಧಾನ್, ಭೂಪೇಂದ್ರ ಯಾದವ್ ಮತ್ತು ಕಿರಣ್ ರಿಜಿಜು ಅವರ ಸಮ್ಮುಖದಲ್ಲಿ ಪಕ್ಷದ ಚುನಾವಣಾಧಿಕಾರಿ ಕೆ.ಲಕ್ಷ್ಮಣ್ ಅವರಿಗೆ ನಬಿನ್ 37 ನಾಮಪತ್ರಗಳ ಸೆಟ್ ಅನ್ನು ಹಸ್ತಾಂತರಿಸಿದರು.

ನಿತಿನ್ ಅವರನ್ನು ಬೆಂಬಲಿಸಿ, ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು, ಯುಪಿ ಸಿಎಂ ಯೋಗಿ ಆದಿತ್ಯನಾಥ್, ಉತ್ತರಾಖಂಡದ ಸಿಎಂ ಪುಷ್ಕರ್ ಸಿಂಗ್ ಧಾಮಿ, ಹರಿಯಾಣ ಸಿಎಂ ನಯಾಬ್ ಸಿಂಗ್ ಸೈನಿ, ಗೋವಾ ಸಿಎಂ ಪ್ರಮೋದ್ ಸಾವಂತ್ ಸೇರಿದಂತೆ ಹಲವು ರಾಜ್ಯಗಳ ನಾಯಕರು ಉಪಸ್ಥಿತರಿದ್ದರು. ಬಿಹಾರ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಅಸ್ಸಾಂ, ಜಾರ್ಖಂಡ್ ಮತ್ತು ಇತರ ರಾಜ್ಯಗಳು 45 ವರ್ಷದ ನಿತಿನ್ ನಬಿನ್ ಅವರನ್ನು ಪಕ್ಷದ ರಾಷ್ಟ್ರಾಧ್ಯಕ್ಷರನ್ನಾಗಿ ಆಯ್ಕೆ ಮಾಡಲು ಬೆಂಬಲಿಸಿ ನಾಮಪತ್ರಗಳನ್ನು ಸಲ್ಲಿಸಿದ್ದವು.

ಬಿಜೆಪಿಯ ಹಿರಿಯ ನಾಯಕ, ಬಿಹಾರದ ನಿತಿನ್ ನಬಿನ್, ಹಿರಿಯ ಬಿಜೆಪಿ ಮುಖಂಡ, ಮಾಜಿ ಶಾಸಕ ದಿವಂಗತ ನಬಿನ್ ಕಿಶೋರ್ ಪ್ರಸಾದ್ ಸಿನ್ಹಾ ಅವರ ಮಗ. ತಮ್ಮ ತಂದೆಯ ಅಕಾಲಿಕ ಮರಣದ ನಂತರ ನಿತಿನ್ ನಬಿನ್ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದ್ದರು. ನಿತಿನ್ ನಬಿನ್ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ರಸ್ತೆ ನಿರ್ಮಾಣ ಮತ್ತು ನಗರಾಭಿವೃದ್ಧಿ ಖಾತೆಗಳನ್ನು ಹೊಂದಿದ್ದರು. ಬಿಜೆಪಿಯ ಕಾರ್ಯಕಾರಿ ಅಧ್ಯಕ್ಷರಾಗಿ ನೇಮಕಗೊಂಡ ನಂತರ ಈ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ನಂದಗಢದಲ್ಲಿ ವೀರಭೂಮಿ ಲೋಕಾರ್ಪಣೆ
ರಾಯಣ್ಣನ ಪ್ರತಿಮೆ ಅನಾವರಣ

ಬೆಳಗಾವಿ: ಸಂಗೊಳ್ಳಿ ರಾಯಣ್ಣನ ಜತೆಗೆ ಯಾರು ಯಾರು ಗಲ್ಲಿಗೇರಿದ್ದಾರೋ ಅವರೆಲ್ಲರ ಸಮಾಧಿಗಳ ಅಭಿವೃದ್ಧಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಖಾನಾಪುರ ತಾಲೂಕಿನ ನಂದಗಡದಲ್ಲಿ ಸೋಮವಾರ ರಾಯಣ್ಣನ ವಸ್ತು ಸಂಗ್ರಹಾಲಯ 'ವೀರಭೂಮಿ'ಯನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ರಾಣಿ ಚನ್ನಮ್ಮ ಸೆರೆಯಾದ ನಂತರ ಸ್ವಾತಂತ್ರ್ಯ ಹೋರಾಟವನ್ನು ಸಂಗೊಳ್ಳಿ ರಾಯಣ್ಣ ಹಾಗೂ ಅವರ ಸಹಚರರು ಮುಂದುವರಿಸಿದರು. ಅವರೆಲ್ಲರೂ ಸ್ವಾತಂತ್ರ್ಯ ಹೋರಾಟಗಾರರೇ ಆಗಿದ್ದಾರೆ. ಎಲ್ಲರ ವಂಶಸ್ಥರನ್ನು ಪತ್ತೆ ಮಾಡಿ, ವೀರರ ಸಮಾಧಿಗಳನ್ನು ಗುರುತಿಸಿ ಅಭಿವೃದ್ಧಿ ಮಾಡಲಾಗುವುದು ಎಂದರು.

ನಂದಗಡದಲ್ಲಿರುವ ಸಂಗೊಳ್ಳಿ ರಾಯಣ್ಣ ಸಮಾಧಿ ಸ್ಥಳಕ್ಕೆ ಸಿಎಂ ಸಿದ್ದರಾಮಯ್ಯ ಅವರು ಸೋಮವಾರ ಭೇಟಿ ನೀಡಿ ಜ್ಯೋತಿ ಬೆಳಗಿದರು.

ಸಿಬಿಎಸ್‌ಇ ಮಾದರಿ ಎರಡು ಮಾದರಿ ಪತ್ಯ, ಪರೀಕ್ಷೆಗೆ ಕ್ಯಾಮ್ಸ್ ಮನವಿ
ಎಸೆಸ್ಸೆಲ್ಸಿಗೆ ಸರಳ ಗಣಿತದ ಪರಿಚಯ?

ಬೆಂಗಳೂರು: ಕಬ್ಬಿಣದ ಕಡಲೆಯಾಗಿರುವ ಗಣಿತ ವಿಷಯದಲ್ಲಿ ಫೇಲಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಗ್ಗಿಸಲು ಎರಡು ರೀತಿಯ ಪರೀಕ್ಷೆ ನಡೆಸಬೇಕು ಎನ್ನುವ ಬೇಡಿಕೆ ಬಂದಿದ್ದು, ಇದಕ್ಕೆ ಸರಕಾರ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಲಿದೆ ಎನ್ನುವ ಕುತೂಹಲ ಶಿಕ್ಷಣ ವಲಯದಲ್ಲಿ ಶುರುವಾಗಿದೆ.

ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿಯೇ ಅನೇಕ ವಿದ್ಯಾರ್ಥಿ ಗಳು ಫೇಲಾಗುತ್ತಿದ್ದಾರೆ. ಅನುತ್ತೀರ್ಣಗೊಳ್ಳುವ ಅನೇಕ ವಿದ್ಯಾರ್ಥಿಗಳಿಗೆ ಗಣಿತದಲ್ಲಿ ಆಸಕ್ತಿ ಇರುವುದಿಲ್ಲ. ಇವರು ಪಿಯು ಹಂತದಲ್ಲಿ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಬಯಸು ವುದಿಲ್ಲ. ಆದರೆ ಇನ್ನು ಕೆಲ ವಿದ್ಯಾರ್ಥಿಗಳು ಗಣಿತದಲ್ಲಿಯೇ ಉನ್ನತ ಅಭ್ಯಾಸ ಮಾಡಬೇಕು ಎನ್ನುವ ಲೆಕ್ಕಾಚಾರದಲ್ಲಿರುತ್ತಾರೆ. ಆದ್ದರಿಂದ ಈ ಎರಡು ಭಿನ್ನ ಆಲೋಚನೆಯ ವಿದ್ಯಾರ್ಥಿಗಳಿಗೆ ಭಿನ್ನ ಮಾದರಿಯ ಪ್ರಶ್ನೆ ಪತ್ರಿಕೆ ನೀಡಬೇಕು ಎನ್ನುವ ಮನವಿ ಕೇಳಿಬಂದಿದೆ.

ಈ ಬಗ್ಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಕ್ಯಾಮ್ಸ್ ಸಂಘಟನೆ ಮನವಿ ಮಾಡಿದೆ. ಈಗಾಗಲೇ ಸಿಬಿಎಸ್‌ಇಯಲ್ಲಿ ಗಣಿತ ವಿಷಯಕ್ಕೆ ಎರಡು ಮಾದರಿಯ ಪತ್ಯ ಅಸ್ತಿತ್ವದಲ್ಲಿದೆ. ಆದ್ದರಿಂದ ರಾಜ್ಯ ಪಠ್ಯಕ್ರಮಕ್ಕೂ ಇದನ್ನು ವಿಸ್ತರಿಸಬೇಕು. ಇದರಿಂದ ಗಣಿತದಲ್ಲಿ ಹೆಚ್ಚಿನ ವ್ಯಾಸಂಗ ಮಾಡದೇ ಕಲೆ, ವಾಣಿಜ್ಯವಿಭಾಗ ತಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಈ ರೀತಿ ಮಾಡುವುದರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಬರಲಿದೆ ಎಂದು ಕ್ಯಾಮ್ಸ್ ಅಭಿಪ್ರಾಯಪಟ್ಟಿದೆ.

ಹೇಗಿರಬೇಕು ಗಣಿತ ಪರೀಕ್ಷೆ?: ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ, ರಾಜ್ಯ ಪಠ್ಯಕ್ರಮದಲ್ಲಿ ಅಧ್ಯಯನ ಮಾಡುವ ಎಂಟರಿಂದ 10 ಲಕ್ಷ ವಿದ್ಯಾರ್ಥಿಗಳು ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಾರೆ. ಇದರಲ್ಲಿ ಶೇ.50ರಷ್ಟು ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ಅಥವಾ ಗಣಿತದ ವಿಷಯ ಬರುವ ಕೋರ್ಸ್‌ಗಳನ್ನು ತಗೆದುಕೊಳ್ಳುವುದಿಲ್ಲ. ಕಲೆ ಅಥವಾ ಇನ್ನಿತರೆ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳುವ ಅನೇಕ ವಿದ್ಯಾರ್ಥಿಗಳಿಗೆ ಗಣಿತ ವಿಷಯದ ಅವಶ್ಯಕತೆ ಹಾಗೂ ಆಸಕ್ತಿ ಇರುವು ದಿಲ್ಲ. ಆದ್ದರಿಂದ ಅಂತಹ ವಿದ್ಯಾರ್ಥಿಗಳಿಗೆ 'ಬೇಸಿಕ್' ಗಣಿತವೆಂದು ಪರಿಗಣಿಸಿ ಪ್ರತ್ಯೇಕ ಪ್ರಶ್ನೆ ಪತ್ರಿಕೆ ನೀಡಬೇಕು. ಗಣಿತದಲ್ಲಿ ಓದುವ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಈಗಿರುವಂತೆ ಪ್ರಶ್ನೆಪತ್ರಿಕೆಯನ್ನು ರೂಪಿಸಲಿ. ಇದರಿಂದ ಎರಡೂ ತರಹದ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುತ್ತದೆ. ಈ ರೀತಿಯ ವ್ಯವಸ್ಥೆ ಈಗಾಗಲೇ ಸಿಬಿಎಸ್‌ಇ ಪತ್ಯದಲ್ಲಿದೆ. ಆದ್ದರಿಂದ ಅಲ್ಲಿ ವಿದ್ಯಾರ್ಥಿಗಳಿಗೆ ಸಿಗುತ್ತಿರುವ ನ್ಯಾಯ, ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಾಂಗ ಮಾಡುವ ವಿದ್ಯಾರ್ಥಿಗಳಿಗೂ ಸಿಗಬೇಕು ಎಂದು ಮನವಿ ಸಲ್ಲಿಸಿದ್ದಾರೆ.

- ಸಿಬಿಎಸ್‌ಇ ಮಾದರಿಯಲ್ಲಿ ಪ್ರಾಥಮಿಕ ಮತ್ತು ಅತ್ಯುನ್ನತ ಗಣಿತದ ಮಧ್ಯೆ ವಿದ್ಯಾರ್ಥಿಗಳಿಗೆ ಆಯ್ಕೆ ಅವಕಾಶಕ್ಕೆ ಮನವಿ
- ಗಣಿತದಲ್ಲಿ ಆಸಕ್ತಿಯಿಲ್ಲದೇ ಅನುತ್ತೀರ್ಣಗೊಳ್ಳುವ ವಿದ್ಯಾರ್ಥಿಗಳ ಪ್ರಮಾಣ ಕಡಿಮೆ ಮಾಡಲು ಹೊಸ ಕಾರ್ಯತಂತ್ರ

ಗಣಿತದ ಪರೀಕ್ಷೆಯನ್ನು ಎರಡು ಹಂತದಲ್ಲಿ ನಡೆಸಬೇಕು ಎಂದು ಮನವಿ ಮಾಡಿದ್ದೇವೆ. ವಿದ್ಯಾರ್ಥಿಗಳಿಗೆ ಆರಂಭದಲ್ಲಿಯೇ ಯಾವ ಪತ್ಯದಲ್ಲಿ ಮುಂದುವರಿಯಬೇಕು ಎನ್ನುವ ಆಯ್ಕೆಯನ್ನು ಮಾಡಲು ಅವಕಾಶ ಸಿಗುತ್ತದೆ. ಸಾಮಾನ್ಯ ಗಣಿತದಲ್ಲಿ ಈಗಿರುವ ಪತ್ಯವಿದ್ದರೆ, ಸರಳ ಗಣಿತದಲ್ಲಿ ಜೀವನಕ್ಕೆ ಬೇಕಿರುವ ಗಣಿತ ಕಲಿಯುವ ಪತ್ಯ ಇರುತ್ತದೆ. ಇದು ಈಗಾಗಲೇ ಸಿಬಿಎಸ್‌ಇ ಪತ್ಯದಲ್ಲಿರುವುದರಿಂದ ರಾಜ್ಯ ಪತ್ಯಕ್ಕೂ ಅಳವಡಿಸಿಕೊಳ್ಳಬೇಕು ಎನ್ನುವುದು ನಮ್ಮ ವಾದ. ಹಾಗೆಂದ ಮಾತ್ರಕ್ಕೆ ನಮ್ಮ ಮನವಿಯಲ್ಲಿ ಎರಡು ಭಾಗವಾಗಿ ಪರೀಕ್ಷೆ ಮಾಡಬೇಕು ಎಂಬ ಬೇಡಿಕೆ ಇಲ್ಲ.

-ಡಿ. ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ, ಕ್ಯಾಮ್ಸ್

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

PUBLIC NOTICE/CAUTION

(CANCELATION OF GENERAL POWER OF ATTORNEY DATED 08-05-2019) This is to inform the general public that my client **Mrs. NIDHI CHEEKIREDDY,** W/o. T. Ravi Teja, Aged about 36 years, Presently R/at. 9905 Schramm st, Irving, Texas, USA-75063, has executed the notarised GPA dated 08-05-2019 which was notarized before Mr. Ben Zhang, Notary Public, Philadelphia Country, which was adjudicated on 13-05-2-19 before the District Registrar & Deputy Commissioner of Stamps, Basavanagudi District, Bangalore in favour of one **Mrs. CHEEKIREDDY VINATHA,** W/o. Cheekireddy Rajashekar Reddy, R/at. Flat No.1201, SV Pleasanta, Chambenahalli Bus stand, Sarjapur, Bangalore-562125 in respect of the schedule property hereunder described, only to the extent of authorizing her to purchase the schedule property on behalf of my client and the said act is done by her. As such from that day itself the said GPA dated 08-05-2019 stands cancelled and my client herewith call upon the public in general not to deal/ to enter in any transaction with the above said **Mrs. CHEEKIREDDY VINUTHA** in respect of the schedule property hereunder, if so done my client is not responsible for the said transactions.

SCHEDULE PROPERTY

All that piece and parcel of property bearing **Flat No.1201, 2nd Floor,** Block-1, PID No. 150200100100221015, VP Katha No.1092/1201, measuring total area of 165.43 Sq.mtr in **"S.V.PLEASANTA",** consisting of One living Room, One Kitchen, One Dining, Three Bed Rooms, Three bathrooms, Four balconies, One utility, One car parking in basement floor, situated at **Chambenahalli Village, Sarjapura Hobli, Anekal Taluk, Bangalore Urban District** along with 56.75 Sq.mts of undivided share in the land, bounded on as follows:

East By : Open Space
West By : Open Space
North By : Open Space
South By : Flat No.1202

KAVYASHREE.J.M
ADVOCATE
No-301, Muneshwara Nilaya, 3rdMain, 3rd Cross, Gangarathnappa Road, Jnanajyothi Nagar, Bangalore-560056. Mobile No.7619281865, Email: kavyashreej.m761928@gmail.com

IN THE HIGH COURT OF DELHI AT NEW DELHI Notice Under Order V Rule 20 Code of Civil Procedure

RFA (OS) No. 24/2017 and CM No. 14207/2022, 14208/2022 Appeal against the Order dated 09.01.2017 Passed by Hon'ble Mr. Justice Rajiv Sahai Endlaw. In Civil Suit No. 461/2016

Ms. Asha Gupta
APPELLANT(S)
VERSUS
Northern Eastern Publishing & Advertising Co. & Anr.
RESPONDENT(S)

Notice to: Ms. Sarita Madhani, Email: ragozcy@yahoo.co.uk Ms. Sonia Khinvasra (daughter of Deceased Appellant), R/o No. 4, Skyline Residency. 5, Kingston Road, Richmond Town, Bangalore 560025 (Daughter of Deceased Appellant)

Whereas the above-noted appellant has presented an appeal under Section 96 and Order XLI rule 1 CPC read with Section 10 of Delhi High Court along with the above-mentioned application which was listed before the Court on 09.05.2017 and on other subsequent dates wherein the Court ordered issuances of notice to you.

And whereas it has been proved to the satisfaction of the Court that you cannot be served in the ordinary manner, notice by way of publication is hereby issued that, if you wish to defend the above-mentioned appeal and application, you may cause an appearance to be entered on your behalf either personally or through an advocate duly appointed by you for the purpose before the Court of Worthy Registrar (Appellate) on 18.02.2026 (actual) at 11:00 a.m.

If no appearance is made on your behalf, by yourself, your pleader or someone by law authorized to act for you in the said appeal and application on the aforementioned date, no further notice of the subsequent date of hearing of the said appeal and application will be given and the same will be heard and determined ex-parte in your absence.

Given under my hand and the seal of this Court on this 26th day of November, 2025.

Seal

Assistant Registrar (Appl.) (Civil) for REGISTRAR GENERAL

ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಳಾಂತರಕ್ಕೆ ಒತ್ತಾಯ

ಆನೇಕಲ್: ತಾಲೂಕಿನ ಚಿಕ್ಕನಾಗ ಮಂಗಲ ಗ್ರಾಮದ ಬಳಿ ಇರುವ ಜಿಬಿಎ ಘನತ್ಯಾಜ್ಯ ಸಂಸ್ಕರಣ ಘಟಕವನ್ನು ಬೇರಡೆಗೆ ಸ್ಥಳಾಂತರಿಸಬೇಕೆಂದು ಆಗ್ರಹಿಸಿ ಸ್ಥಳೀಯರು ಮತ್ತು ಅಪಾರ್ಟ್‌ಮೆಂಟ್ ನಿವಾಸಿಗಳು ಘಟಕದ ಮುಂದೆ ಪ್ರತಿಭಟನೆ ನಡೆಸಿದರು. ಚಿಕ್ಕನಾಗಮಂಗಲದ ಜಿಬಿಎಂ ಘನತ್ಯಾಜ್ಯ ಸಂಸ್ಕರಣ ಘಟಕದಿಂದಾಗಿ ಸುತ್ತಲಿನ ಪರಿಸರ ಕಲುಷಿತಗೊಳ್ಳುತ್ತಿದೆ. ಸ್ಥಳೀಯರು ಆರೋಗ್ಯ ಸಮಸ್ಯೆಯಿಂದ ಪರದಾಡುವ ಉಂಟಾಗಿದೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಎಸ್. ಚಂದ್ರಶೇಖರ್‌ರವರಿಗೆ** ಪ್ರಸ್ತುತ ಸಂಬಂದಪಟ್ಟ ಬೆಂಗಳೂರು ಉತ್ತರ ಬೆಂಗಳೂರು ಉತ್ತರ ತಾಲೂಕು, ದಾಸನಪುರ ಹೋಬಳಿ ಶಿವನಪುರ ಗ್ರಾಮದ ಸರ್ವೆ ಸಂಖ್ಯೆ 7 ಮತ್ತು 8 ಜಮೀನುಗಳಲ್ಲಿ ವಿಂಗಡಿಸಿರುವ ನಿವೇಶನ ಸಂಖ್ಯೆ 848 ಇ ಖಾತಾ ಸಂಖ್ಯೆ 150200200701102716 ಗೆ ಸಂಬಂದಪಟ್ಟ ಅದರ ಹಿಂದಿನ ಮಾಲೀಕರಾದ ಶ್ರೀಮತಿ ಸುಜಾತ ರವರಿಗೆ ಬೆಂಗಳೂರು ಉತ್ತರ ತಾಲೂಕಿನ, ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಕೊಡಲ್ಪಟ್ಟ ಮೂಲ ಹಕ್ಕು ಪತ್ರ ಕಳೆದುಹೋಗಿರುತ್ತದೆ. ಸದರಿ ಹಕ್ಕುಪತ್ರವು ಯಾರಿಗಾದರು ಸಿಕ್ಕಿದ ಪಕ್ಷದಲ್ಲಿ ಈ ಕೆಳಕಂಡವರಿಗೆ ಹಿಂದಿರುಗಿಸಿದ್ದಲ್ಲಿ ಅಥವಾ ಮಾಹಿತಿ ನೀಡಿದ್ದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ತೆರನಾದ ಹಕ್ಕುಗಳಿದ್ದಲ್ಲಿ, ಸದರಿ ಹಕ್ಕಿನ ಸಂಬಂದ ಲಿಖಿತ ಆಕ್ಷೇಪಣೆಯನ್ನೂ ಪೂರಕ ದಾಖಲೆಗಳೊಂದಿಗೆ ಸಲ್ಲಿಸಬಹುದು,

ಮೋಹನದಾಸ ಎನ್., ನ್ಯಾಯವಾದಿ,
3944/ಎ, 2ನೇ ಅಡ್ಡರಸ್ತೆ, 'ಬಿ' ಬ್ಲಾಕ್, ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ, ಬೆಂಗಳೂರು – 560021
ಸಂ.ದೂ: 9448129391 / 9886776714

PUBLIC NOTICE

Public are hereby informed that my clients intend to purchase all that piece and parcel of immoveable Property in the northern portion of the residential property consisting of Ground and First floor, situated at, No 18, Old No 41, in corporation division No 74, with land measuring 906.02Sq ft, Hutchins road,11th cross Cooke Town Bangalore 560005, PID No : 86-4-18/2, from its present owner Mrs Kalavathi Shankar, W/o S Shankar, Aged about 62 years R/a Chennai. Any person/s having any claim or objections to the proposed purchase may write and call the undersigned within **14 days** of the publication hereof along with supporting documentary evidence, failing which my client will proceed with the transaction and any claim received thereafter will not be entertained.

BENEDICT ANAND, Advocate,
No. 31, 515 Army Colony, Thippasandra, Bangalore 75 Mobile: 98450 43271

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಎಆರ್‌ಎಂ–1 ಶಾಖೆ, 2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು. ದೂ: 080–25588642

ಇ–ಹರಾಜು ಹಿಂತೆಗೆದುಕೊಳ್ಳುವಿಕೆ

ದಿನಾಂಕ: **04.01.2026** ರಂದು ವಿಶ್ವವಾಣಿ ಪ್ರಕಟಣೆಯಲ್ಲಿ ಇ–ಹರಾಜು ನೋಟೀಸ್‌ನಲ್ಲಿ **ಸಾಲಗಾರರು / ಅಡಮಾನದಾರರಾದ: (1) ಮೆ॥ ಬಯೋಪಾಯಿಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ & ಇತರರಿಗೆ ಸಂಬಂಧಿಸಿದ** ಆಸ್ತಿಯ ಇ–ಹರಾಜು ಮಾರಾಟವು ದಿನಾಂಕ: **05.02.2026 (ಬೆಳಿಗ್ಗೆ 10.30ರಿಂದ 11.00)** ಕ್ಕೆ ನಿಗಧಿಯಾಗಿದ್ದು ಅದನ್ನು ಹಿಂತೆಗೆದುಕೊಳ್ಳಲಾಗಿದೆ.

ದಿನಾಂಕ: 19.01.2026 ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ ಕೆನರಾ ಬ್ಯಾಂಕ್

ಬೈಂಕ ಑ಫ ಬಡ़ौदा Bank of Baroda
ಗಂಗಾನಗರ ಶಾಖೆ
ನಂ.19/10, 1ನೇ ಮುಖ್ಯರಸ್ತೆ, ಗಂಗಾನಗರ, ಬೆಂಗಳೂರು–560032
ದೂರವಾಣಿ: 08023639339/23330882 ಇ–ಮೇಲ್: vjgang@bankofbaroda.co.in

ಲಾಕರ್ ಬ್ರೇಕ್ ಓಪನ್ ನೋಟಿಸ್

ಈ ಕೆಳಗಿನ **ಬ್ಯಾಂಕ್ ಆಫ್ ಬರೋಡಾ, ಗಂಗಾನಗರ ಶಾಖೆ, ಬೆಂಗಳೂರಿನಲ್ಲಿ** ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು, ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 3 ತಿಂಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ಗಂಗಾನಗರ

ಕ್ರ. ಸಂ	ಗ್ರಾಹಕರ ಹೆಸರು	ಲಾಕರ್ ಸಂಖ್ಯೆ	ದಂಡದೊಂದಿಗೆ ಬಾಕಿಯಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
1	ಶ್ರೀ ವಿಜಯ್ ಶೆಟ್ಟಿ ಮತ್ತು ಶ್ರೀಮತಿ ಸಾರಿಕಾ ಶೆಟ್ಟಿ, ನಂ.351, ಆನಂದನಗರ, ಹೆಚ್‌ಎಂಟಿ ಲೇಔಟ್, ಬೆಂಗಳೂರು–560032.	7375AX0227 (old no: 257)	ರೂ. 14,524/–	20.04.2026 ಮಧ್ಯಾಹ್ನ 3.00

ದಿನಾಂಕ: 19.01.2026
ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

23 ಸ್ಥಳೀಯ ಸಂಸ್ಥೆಗಳ ಮೀಸಲು ಪಟ್ಟಿ ಸಿದ್ಧ | ಹೈಕೋರ್ಟ್‌ಗೆ ಸರಕಾರದ ಪರ ವಕೀಲರ ಮಾಹಿತಿ

ಸ್ಥಳೀಯ ಸಂಸ್ಥೆಗಳ ವಾರ್ಡ್‌ವಾರು ಮೀಸಲು ಸಿದ್ಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ರಾಜ್ಯದ 23 ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್‌ವಾರು ಮೀಸಲಾತಿ ಪಟ್ಟಿ ಸಿದ್ಧವಾಗಿದ್ದು, ಸಚಿವರ ಅನುಮೋದನೆಗಾಗಿ ರವಾನಿಸಲಾಗಿದೆ ಎಂದು ಸರಕಾರದ ಪರ ವಕೀಲರು ಹೈಕೋರ್ಟ್‌ಗೆ ಮಾಹಿತಿ ನೀಡಿದರು.

ಎರಡನೇ ಅವಧಿಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸಲು ವಿಳಂಬವಾದ ಹಿನ್ನೆಲೆಯಲ್ಲಿ, ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ ಅವಧಿಯನ್ನು ತಮ್ಮ ಐದು ವರ್ಷದ ಅಧಿಕಾರಾವಧಿಗೆ ಪರಿಗಣಿಸಬಾರದು. ಈಗ ಅವಧಿ ಮುಗಿದ ಕಾರಣ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿರುವುದನ್ನು ಪ್ರಶ್ನಿಸಿ, ಕೋಲಾರ ನಗರಸಭೆ ಸೇರಿದಂತೆ ರಾಜ್ಯದ 70ಕ್ಕೂ ಅಧಿಕ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಹಲವು ಅರ್ಜಿಗಳನ್ನು ಸಲ್ಲಿಸಿದ್ದರು.

ಈ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಸರಕಾರ ಈ ಮಾಹಿತಿ ನೀಡಿದೆ. ಅಲ್ಲದೆ, 28 ಸ್ಥಳೀಯ ಸಂಸ್ಥೆಗಳ ಕರಡು ಮೀಸಲಾತಿ ಪ್ರಕಟಿಸಲಾಗಿದೆ. ಅಂತಿಮ ಮೀಸಲಾತಿ ಪಟ್ಟಿಯನ್ನು ಬಳಿಕ ಚುನಾವಣಾ ಆಯೋಗಕ್ಕೆ ರವಾನಿಸಲಾಗುವುದು ಎಂದು ವಕೀಲರು ನ್ಯಾಯಪೀಠಕ್ಕೆ ಮಾಹಿತಿ ಒದಗಿಸಿದರು. ಹಿಂದೆ ನಡೆದಿದ್ದ ವಿಚಾರಣೆ ವೇಳೆ, ಸರಕಾರದ ಪರ ವಕೀಲರು, 'ಕೆಲವು ನಗರ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್ ಮರುವಿಂಗಡಣೆ ಮಾಡಬೇಕಿತ್ತು. ಆ ಪ್ರಕ್ರಿಯೆ ಮುಗಿಸಲಾಗಿದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ವಾರು ಮೀಸಲಾತಿಯ ಕರಡು ಅಧಿಸೂಚನೆ ಹೊರಡಿಸಲಾಗಿದೆ. ಆಕ್ಷೇಪಣೆಗೆ ಕಾಲಾವಕಾಶ ನೀಡಿದ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಿ, ಪಟ್ಟಿಯನ್ನು ಚುನಾವಣಾ ಆಯೋಗಕ್ಕೆ ನೀಡಲಾಗುವುದು' ಎಂದು ತಿಳಿಸಿದರು.

10 ದಿನಗಳಲ್ಲಿ ವರದಿ ಸಲ್ಲಿಸಲು ಸರಕಾರಕ್ಕೆ ಸೂಚನೆ

ಈ ಅಂಶವನ್ನು ದಾಖಲಿಸಿಕೊಂಡಿದ್ದ ನ್ಯಾಯಪೀಠ, ಚುನಾವಣೆ ನಡೆಸುವ ವಿಚಾರದಲ್ಲಿ ಸರಕಾರ ಕೈಗೊಳ್ಳುವ ಕ್ರಮಗಳನ್ನು ಪ್ರತಿ ವಾರದ ಆಧಾರದಲ್ಲಿ ಮೇಲ್ವಿಚಾರಣೆ ನಡೆಸಲಾಗುವುದು. ಐದು ವರ್ಷದ ಅವಧಿ ಮುಗಿಸಿರುವ ಚುನಾಯಿತ ಸದಸ್ಯರ ಅಧಿಕಾರಾವಧಿ ಮುಗಿದಿದೆ. ಹಾಗಾಗಿ, ಯಾವುದೇ ಹಕ್ಕು ಪ್ರತಿಪಾದಿಸಲು ಅವರಿಗೆ ಹೆಚ್ಚು ಅವಕಾಶ ಇಲ್ಲವಾಗಿದೆ. ಆದರೆ, ಐದು ವರ್ಷದ ಅವಧಿ ನಿಗದಿ, ಮೀಸಲಾತಿ ವಿಳಂಬ, ಆಡಳಿತಾಧಿಕಾರಿಗಳ ನೇಮಕ ಸೇರಿದಂತೆ ಅರ್ಜಿದಾರರು ಎತ್ತಿರುವ ಕಾನೂನು ಪ್ರಶ್ನೆಗಳ ಬಗ್ಗೆ ಅವುಗಳ ಅರ್ಹತೆ ಆಧಾರದಲ್ಲಿ ವಿಚಾರಣೆ ಮುಂದುವರೆಸಲಾಗುವುದು. ಸರಕಾರ 10 ದಿನಗಳಲ್ಲಿ ವಸ್ತುಸ್ಥಿತಿ ವರದಿ ಸಲ್ಲಿಸಬೇಕು. ಅರ್ಜಿದಾರರು ತಮ್ಮ ಆಕ್ಷೇಪಣೆಗಳನ್ನು ಲಿಖಿತವಾಗಿ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದ ಹೈಕೋರ್ಟ್ ವಿಚಾರಣೆ ಮುಂದೂಡಿತು.

ಬಸ್ ಡಿಕ್ಕಿ ಹೊಡೆದು ತಾಯಿ-ಮಗ ಸಾವು



ಬೆಂಗಳೂರು: ಕಾಲೇಜು ಬಸ್ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ತಾಯಿ–ಮಗ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಅಶೋಕನಗರ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಈಜಿಪುರದ ನಿವಾಸಿ ಸಂಗೀತಾ (37) ಮತ್ತು ಇವರ ಪುತ್ರ ಪಾರ್ಥ (8) ಮೃತ ದುರ್ದೈವಿಗಳು. ಸಂಗೀತಾ ಅವರು ಆಡುಗೋಡಿ ಸಮೀಪದ ಆರ್ಮಿ ಪಬ್ಲಿಕ್ ಶಾಲೆಯಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದು, ಇವರಿಗೆ ಇಬ್ಬರು ಮಕ್ಕಳಿದ್ದು, ಪತಿ ಆಂಧ್ರ ಪ್ರದೇಶದಲ್ಲಿ ವಾಸವಾಗಿದ್ದು, ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರು. ಸೋಮವಾರ ಬೆಳಗ್ಗೆ ಸುಮಾರು 6.30ರ ಸಂದರ್ಭದಲ್ಲಿ ಮಗ ಪಾರ್ಥನನ್ನು ಕರೆದುಕೊಂಡು ಸಂಗೀತಾ ಅವರು ಶಾಲೆ ಸಮೀಪ ರಸ್ತೆ ದಾಟುತ್ತಿರುವಾಗ ವಿವೇಕನಗರದ ಜಂಕ್ಷನ್ ಬಳಿ ಖಾಸಗಿ ಕಾಲೇಜಿನ ಬಸ್ಸೊಂದು ಇವರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಇಬ್ಬರೂ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಕೊನೆಯುಸಿರೆಳೆದಿದ್ದಾರೆ. ಅಪಘಾತದ ನಂತರ ಬಸ್ ಚಾಲಕ ವಾಹನವನ್ನು ನಿಲ್ಲಿಸದೇ ಹೋಗಿದ್ದಾನೆ. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಮೃತ ದೇಹಗಳನ್ನು ಬೌರಿಂಗ್ ಆಸ್ಪತ್ರೆಗೆ ಸಾಗಿಸಿದ್ದಾರೆ. ಅಶೋಕನಗರ ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

1.75 ಕೋಟಿ ರು.ವಂಚನೆ: ಸಿವಿಲ್ ಎಂಜಿನಿಯರ್ ಸೆರೆ

ಬೆಂಗಳೂರು: ಪತ್ನಿಯನ್ನೇ ಅಕ್ಕ ಎಂದು ಪರಿಚಯಿಸಿ ವೈಟ್‌ಫೀಲ್ಡ್‌ನ ಯುವತಿಯೊಬ್ಬರನ್ನು ಮದುವೆಯಾಗುವುದಾಗಿ ನಂಬಿಸಿ 1.75 ಕೋಟಿ ರು. ಹಣ ಪಡೆದು ವಂಚಿಸಿರುವ ಸಿವಿಲ್ ಎಂಜಿನಿಯರ್ ಒಬ್ಬನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುಣಿಗಲ್ ನಿವಾಸಿ ವಿಜೇಶ್ ಬಿ. ಅಲಿಯಾಸ್ ವಿಜಯರಾಜ್ ಗೌಡ (32) ಬಂಧಿತ ಆರೋಪಿ. ಈತ ಬಿಇ ಸಿವಿಲ್ ವ್ಯಾಸಂಗ ಮಾಡಿದ್ದು, ಕೆಲವು ತಿಂಗಳುಗಳ ಕಾಲ ಎಂಜಿನಿಯರ್ ವೃತ್ತಿ ಮಾಡಿದ್ದ. ವೈಟ್‌ಫೀಲ್ಡ್‌ನಲ್ಲಿ ವಾಸವಾಗಿರುವ ಮಹಿಳಾ ಸಾಫ್ಟ್‌ವೇರ್ ಎಂಜಿನಿಯರ್ ಅವರನ್ನು ಮ್ಯಾಟ್ರಿಮೋನಿಯಲ್ಲಿ ಪರಿಚಯಿಸಿಕೊಂಡ ಈ ಆರೋಪಿ ತನ್ನ ಪತ್ನಿಯನ್ನು ಸೋದರಿಯೆಂದು, ತಂದೆಯನ್ನು ನಿವೃತ್ತ ತಹಸೀಲ್ದಾರ್ ಎಂದು ಪರಿಚಯಿಸಿ ಹಾಗೂ ತಮಗೆ ಕೋಟ್ಯಂತರ ರು. ಮೌಲ್ಯದ ಆಸ್ತಿ ಇದೆ ಎಂದು ನಂಬಿಸಿ ಹಂತ ಹಂತವಾಗಿ 1.75 ಕೋಟಿ ಹಣ ಪಡೆದುಕೊಂಡಿದ್ದ. ನಂತರ ದಿನದಲ್ಲಿ ಹಣ ವಾಪಸ್ ಕೊಡುವಂತೆ ಯುವತಿ ಮತ್ತು ಆಕೆಯ ಸ್ನೇಹಿತರು ಒತ್ತಾಯಿಸಿದಾಗ ಆರೋಪಿ ಆರಂಭದಲ್ಲಿ ಸ್ವಲ್ಪ ಹಣವನ್ನು ನೀಡಿದ್ದಾನೆ. ತದ ನಂತರದಲ್ಲಿ ಉಳಿದ ಹಣ ಕೊಡಲು ಹಿಂದೇಟು ಹಾಕಿದ್ದಾನೆ. ಉಳಿದ ಹಣ ಕೊಡುವಂತೆ ಒತ್ತಾಯ ಮಾಡಿದಾಗ ಆರೋಪಿ ಯುವತಿಗೆ ಬೆದರಿಕೆ ಹಾಕಿದ್ದಾನೆ. ಆಗ ಆಕೆ ಈತನ ಹಿನ್ನೆಲೆ ವಿಚಾರಿಸಿದಾಗ ಅಸಲಿ ಮುಖ ಬಯಲಾಗಿದೆ. ಆರೋಪಿಗೆ ಈಗಾಗಲೇ ಮದುವೆಯಾಗಿದ್ದು, ಒಂದು ಮಗುವಿರುವುದು ತಿಳಿದು ಬಂದಿದೆ. ನಂತರ ತಾನು ಮೋಸ ಹೋಗಿರುವುದಾಗಿ ಅರಿತ ಯುವತಿ ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ದೂರು ನೀಡಿದರು. ಕೃತ್ಯ ನಡೆದ ಸ್ಥಳ ಕೆಂಗೇರಿ ಠಾಣೆ ವ್ಯಾಪ್ತಿಗೆ ಬರುವುದರಿಂದ ಪ್ರಕರಣವನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಕೆಂಗೇರಿ ಠಾಣೆಗೆ ವರ್ಗಾವಣೆ ಮಾಡಿದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಬಂಧಿಸಿ, ಉಳಿದ ಇಬ್ಬರು ಆರೋಪಿಗಳ ಪಾತ್ರವೇನು ಎಂಬುವುದರ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

1.73 ಕೋಟಿ ರು. ಮೌಲ್ಯದ ಹೈಡ್ರೊಪೋನಿಕ್ ಗಾಂಜಾ ವಶ

ಬೆಂಗಳೂರು: ಕೌಲಾಲಂಪುರದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಆಗಮಿಸಿರುವ ಪ್ರಯಾಣಿಕರೊಬ್ಬರನ್ನು ಬಂಧಿಸಿರುವ ಕಸ್ಟಮ್ಸ್ ಅಧಿಕಾರಿಗಳು ಸುಮಾರು 1.73 ಕೋಟಿ ರು. ಮೌಲ್ಯದ ಹೈಡ್ರೊಪೋನಿಕ್ ಗಾಂಜಾ ವಶಪಡಿಸಿಕೊಂಡಿದ್ದಾರೆ. ವಿದೇಶದಿಂದ ಬಂದು ವಿಮಾನ ನಿಲ್ದಾಣದಿಂದ ಹೊರಹೋಗುವಾಗ ಅನುಮಾನದ ಮೇಲೆ ಪ್ರಯಾಣಿಕರನ್ನು ತಡೆದು ಅವರ ಸರಕನ್ನು ಪರಿಶೀಲಿಸಿದಾಗ ಅದರಲ್ಲಿ 4.96 ಕೆಜಿ ಹೈಡ್ರೊಪೋನಿಕ್ ಗಾಂಜಾ ಪತ್ತೆಯಾಗಿದೆ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ. ಪ್ರಕರಣ ಕುರಿತಂತೆ ತನಿಖೆ ಕೈಗೊಳ್ಳಲಾಗಿದ್ದು, ಇದನ್ನು ಎಲ್ಲಿಗೆ ಸರಬರಾಜು ಮಾಡಲಾಗುತ್ತಿತ್ತು ಎಂಬುದರ ಬಗ್ಗೆ ಪತ್ತೆ ಕಾರ್ಯ ನಡೆಯುತ್ತಿದೆ. ಮತ್ತೊಂದು ಪ್ರಕರಣದಲ್ಲಿ ಬ್ಯಾಂಕಾಕ್‌ನಿಂದ ಬಂದ ಸರಕನ್ನು ಪಡೆಯಲು ಬಂದ ವ್ಯಕ್ತಿಯನ್ನು ವಶಕ್ಕೆ ಪಡೆದು ಅದನ್ನು ಪರಿಶೀಲಿಸಿದಾಗ ಅದರಲ್ಲಿ ವನ್ಯಪಕ್ಷಿಗಳ ಅಕ್ರಮ ಕಳ್ಳಸಾಗಣೆ ಬೆಳಕಿಗೆ ಬಂದಿದೆ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ 66/11 ಕೆವಿ ಬಾಣಸವಾಡಿಯ ಉಪಕೇಂದ್ರ ವ್ಯಾಪ್ತಿಯಲ್ಲಿ ಬುಧವಾರ ಬೆಳಗ್ಗೆ 10 ರಿಂದ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ಎಚ್‌ಆರ್‌ಬಿಆರ್ ಲೇಔಟ್ 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, ಸರ್ವೀಸ್ ರೋಡ್, ಕಮ್ಮನಹಳ್ಳಿ ಮೇನ್ ರೋಡ್, ಸಿಎಂಆರ್ ರೋಡ್, ಬಾಬುಸಾಪಾಳ್ಯ, ಬಾಲ ಚಂದ್ರ ಲೇಔಟ್, ಅರ್ಕಾವತಿ ಲೇಔಟ್, ಅಂಜನಾದ್ರಿ ಲೇಔಟ್ ಎನ್‌ಕ್ಲೇವ್, ದಿವ್ಯ ಉನ್ನತಿ ಲೇಔಟ್, ವಿಜಯೇಂದ್ರ ಗಾರ್ಡನ್, ಮಲ್ಲಪ್ಪ ಲೇಔಟ್, ಪ್ರಕೃತಿ ಟೌನ್‌ಶಿಪ್, ಬಾಲಾಜಿ ಲೇಔಟ್, ಜಿಎನ್‌ಆರ್ ಗಾರ್ಡನ್, ಚೆಲೆಕರೆ, ಚೆಲೆಕರೆ ವಿಲೇಜ್, ಸಮುದ್ರಿಕಾ ಎನ್‌ಕ್ಲೇವ್, ಸುಬ್ಬಯ್ಯನಪಾಳ್ಯ, ಹೊರಮಾವು, ಮುನಿರೆಡ್ಡಿ ಲೇಔಟ್, ವಿಜಯ ಬ್ಯಾಂಕ್ ಕಾಲೋನಿ, ನಿಸರ್ಗ ಕಾಲೋನಿ, ನಂದನಂ ಕಾಲೋನಿ, ಅಮರ್ ಏಜೆನ್ಸಿ ಲೇಔಟ್, ಆಶೀರ್ವಾದ್ ಕಾಲೋನಿ, ಶಕ್ತಿ ನಗರ, ಹೆಣ್ಣೂರು ವಿಲೇಜ್, ಬೈರವೇಶ್ವರ ಲೇಔಟ್, ಚಿಕ್ಕಣ್ಣ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಳದಿ ಮಾರ್ಗಕ್ಕೆ ಎಂಟನೇ ರೈಲು

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗಕ್ಕೆ ಕೋಲ್ಕತ್ತಾದಿಂದ ಬೆಂಗಳೂರಿಗೆ ಎಂಟನೇ ಚಾಲಕರಹಿತ ಮೆಟ್ರೋ ಆಗಮಿಸಿದ್ದು, ಮುಂದಿನ ದಿನಗಳಲ್ಲಿ ಹಳದಿ ಮಾರ್ಗದಲ್ಲಿ 8ನೇ ರೈಲು ಸಂಚಾರ ಆರಂಭಗೊಳ್ಳಲಿದೆ. ಈ ಮಾರ್ಗದಲ್ಲಿ ಮೆಟ್ರೋ ರೈಲುಗಳ ಸಂಚಾರ ಹೆಚ್ಚಾಗಲಿದ್ದು, ಇದರಿಂದ ರೈಲುಗಳ ಓಡಾಟದ ಸಮಯ ಕೂಡ ಕಡಿಮೆಯಾಗಲಿದೆ. ಬೆಂಗಳೂರಿನ ಹಳದಿ ಮಾರ್ಗದಲ್ಲಿ 10 ನಿಮಿಷಗಳಿಗೆ ಒಂದರಂತೆ ಮೆಟ್ರೋ ರೈಲುಗಳು ಸಂಚರಿಸುತ್ತಿವೆ. 8ನೇ ರೈಲಿನಿಂದಾಗಿ ಸಂಚಾರ ಆರಂಭದ ಬಳಿಕ ಸಮಯದಲ್ಲಿ ಮತ್ತಷ್ಟು ಕಡಿಮೆಯಾಗುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

ಡ್ರಗ್ಸ್ ಪೆಡ್ಲರ್ ಸೆರೆ

ಬೆಂಗಳೂರು: ರಸ್ತೆ ಬದಿಯಲ್ಲಿ ಬೆಕ್ ನಿಲ್ಲಿಸಿಕೊಂಡು ಮಾದಕ ವಸ್ತುವನ್ನು ಮಾರಾಟ ಮಾಡುತ್ತಿದ್ದ ಡ್ರಗ್ಸ್ ಪೆಡ್ಲರ್ ಓರ್ವನನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗುಜರಾತಿನ ಅಂಬಾ ರಾಮ್ (30) ಬಂಧಿತ ಡ್ರಗ್ ಪೆಡ್ಲರ್. ಪೊಲೀಸರು ಈತನಿಂದ ಒಂದು ದ್ವಿಚಕ್ರ ವಾಹನ ಹಾಗೂ 13 ಗ್ರಾಂ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ. ಉಲ್ಲಾಳ ಕೆರೆ ಬಳಿ ಇರುವ ಬಸ್ ನಿಲ್ದಾಣ ಪಕ್ಕದ ರಸ್ತೆ ಬದಿಯಲ್ಲಿ ಬೈಕ್ ನಿಲ್ಲಿಸಿಕೊಂಡು ಆರೋಪಿ ಸಾರ್ವಜನಿಕರಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಜ್ಞಾನಭಾರತಿ ಠಾಣೆ ಪೊಲೀಸರಿಗೆ ಲಭಿಸಿದೆ. ತಕ್ಷಣ ಪೊಲೀಸರು ಸ್ಥಳಕ್ಕೆ ಧಾವಿಸಿ ಆರೋಪಿಯನ್ನು ಬಂಧಿಸಿ ಮಾದಕ ವಸ್ತು ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಜ್ಞಾನಭಾರತಿ ಠಾಣೆ ಪೊಲೀಸರು ಆರೋಪಿ ಡ್ರಗ್ಸ್ ಅನ್ನು ಎಲ್ಲಿಂದ ತಂದಿದ್ದ ಎಂಬುವುದರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ.

ಸಂಕ್ರಾಂತಿ ಬಳಿಕ ನಗರದಲ್ಲಿ ಹವಾಮಾನ ಏರಿಳಿತ



ಬೆಂಗಳೂರು: ಬೆಂಗಳೂರಿನಲ್ಲಿ ಸಂಕ್ರಾಂತಿ ಬಳಿಕ ಹವಾಮಾನ ವೈಪರೀತ್ಯವುಂಟಾಗಿದ್ದು, ಬೆಳಗಿನಿಂದ ಬಿಸಿಲು ಹಾಗೂ ರಾತ್ರಿಯ ವೇಳೆ ಚಳಿಯ ವಾತಾವರಣ ಕಂಡು ಬರುತ್ತಿದೆ. ಕಳೆದ ಮೂರು ದಿನಗಳಿಂದ ತಾಪಮಾನದಲ್ಲಿ ಭಾರಿ ಏರಿಕೆಯೂ ಕಂಡು ಬಂದಿದೆ.

ನಗರದಲ್ಲಿ ತಾಪಮಾನದ ಹೆಚ್ಚಳದಿಂದ ಪರಿಸ್ಥಿತಿ ಎದುರಿ ಸುವುದೇ ಸಮಸ್ಯೆಯಾಗಿದ್ದು, ಹಗಲಿನ ತಾಪಮಾನದಲ್ಲಿನ ಏರಿಕೆಯು ಹೆಚ್ಚಾಗಿ ಸ್ಪಷ್ಟ ಆಕಾಶ ಮತ್ತು ಶಾಂತ ಗಾಳಿಯಿರುತ್ತದೆ. ಕಡಿಮೆ ಮೋಡದ ಹೊದಿಕೆ ಮತ್ತು ಹಗಲಿನಲ್ಲಿ ಮೇಲ್ಮೈ ಗಾಳಿ ಇಲ್ಲದಿರುವುದರಿಂದ, ಗರಿಷ್ಠ ತಾಪಮಾನವು ಹೆಚ್ಚಾಗಿದೆ. ಈ ಹಿಂದೆ, ಮೇಲ್ಮೈ ಗಾಳಿಯು ಸ್ವಲ್ಪ ತಂಪಾಗಿಸುತ್ತಿತ್ತು, ಆದರೆ ಗಾಳಿಯ ಕೊರತೆಯಿಂದಾಗಿ ಶಾಖವು ಹೆಚ್ಚು ಗಮನಾರ್ಹವಾಗಿದೆ ಎಂದು ಬೆಂಗಳೂರಿನ ಐಎಂಡಿ ಮುಖ್ಯಸ್ಥ ಎನ್ ಪುವಿಯರಸನ್ ಹೇಳಿದರು. ಹಗಲಿನ ತಾಪಮಾನವು ಹೆಚ್ಚಾಗಿದೆ, ಆದರೆ ಶಾಂತ ಪರಿಸ್ಥಿತಿಗಳಿಂದಾಗಿ ರಾತ್ರಿಯ ತಾಪಮಾನವು ಕಡಿಮೆ ಇರುತ್ತದೆ. ಪ್ರಸ್ತುತ ಬಿಸಿಲಿನ ವಾತಾ ವರಣ ತಾತ್ಕಾಲಿಕವಾಗಿದೆ ಮತ್ತು ಮುಂಬರುವ ದಿನಗಳಲ್ಲಿ ಹವಾಮಾನ ಪರಿಸ್ಥಿತಿಗಳು ಏರಿಳಿತಗೊಳ್ಳುವ ನಿರೀಕ್ಷೆಯಿದೆ. ಶಾಖವು ಮಂಜಿನ ಪರಿಸ್ಥಿತಿಗಳನ್ನು ಕಡಿಮೆ ಮಾಡಿದೆ, ಉಸಿರಾಟಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ಕಡಿಮೆ ಮಾಡಲು ಸಹಾಯಕವಾಗಿದ್ದು, ಕೃಷಿ ಚಟುವಟಿಕೆಗಳಿಗೆ ಅನುಕೂಲಕರವಾಗಿದೆಯಾದರೂ ನಗರ ದಲ್ಲಿ ಹೆಚ್ಚುತ್ತಿರುವ ತಾಪಮಾನದ ಪರಿಣಾಮವನ್ನು ನಗರ ಅಂಶಗಳು ಇನ್ನಷ್ಟು ಹದಗೆಡಿಸುತ್ತಿವೆ ಎಂದು ಎಚ್ಚರಿಸಿದ್ದಾರೆ.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಸಂಘ. ಬೆಂಗಳೂರು ನಗರ ಜಿಲ್ಲೆ
ಹಳೇ ಟಿ.ಬಿ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು – 38.

ಸಂಖ್ಯೆ: ಡಿಹೆಚ್‌ಎಸ್/ಬೆಂ.ನ.ಜಿ/ಎನ್‌ಹೆಚ್‌ಎಂ/ಸಿ.ಸಿ.ಬಿ/ನೇಮಕಾತಿ/01/2025–26 ದಿನಾಂಕ: 16.01.2026

ನೇಮಕಾತಿ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆಯ ಸಿ ವಿ ರಾಮನ್ ಆಸ್ಪತ್ರೆಯಲ್ಲಿನ ಕ್ರಿಟಿಕಲ್ ಕೇರ್ ಘಟಕಕ್ಕೆ ಎನ್‌ಹೆಚ್‌ಎಂ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ತಜ್ಞ ವೈದ್ಯರ ಮತ್ತು ಶುಶ್ರೂಷಣಾಧಿಕಾರಿಗಳ ಹುದ್ದೆಗಳನ್ನು ಮಾರ್ಗಸೂಚಿಗಳಂತೆ ನಿಯಾಮಾನುಸಾರ ಮೆರಿಟ್ ಕಮ್ ರೋಸ್ಟರ್ ಅನ್ವಯ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರ ಸ	ಹುದ್ದೆಗಳ ವಿವರ	ವಿದ್ಯಾರ್ಹತೆ	ಮಾಸಿಕ ಸಂಚಿತ ವೇತನ	ಒಟ್ಟು ಹುದ್ದೆಗಳ ಸಂಖ್ಯೆ	ಅಭ್ಯರ್ಥಿ ವೈಯೋಮಿತಿ	ಕಾರ್ಯನಿರ್ವಹಿಸ – ಬೇಕಾದ ಸ್ಥಳ
1	ಜನರಲ್ ಸರ್ಜನ್ ತಜ್ಞ ವೈದ್ಯರು	ಎಂ.ಎಸ್ ಜನರಲ್ ಸರ್ಜರಿ ಮತ್ತು ಕಡ್ಡಾಯವಾಗಿ ಕೆ.ಎಂ.ಸಿ ನೋಂದಣಿ ಹೊಂದಿರಬೇಕು.	1,10,000	01	60 ವರ್ಷ ಒಳಗಿರತಕ್ಕದ್ದು	ಕ್ರಿಟಿಕಲ್ ಕೇರ್ ಘಟಕ, ಸಿ.ವಿ ರಾಮನ್ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು
2	ಜನರಲ್ ಫಿಜಿಷಿಯನ್ ತಜ್ಞ ವೈದ್ಯರು	ಎಂ.ಡಿ ಜನರಲ್ ಮೆಡಿಸಿನ್ ಮತ್ತು ಕಡ್ಡಾಯವಾಗಿ ಕೆ.ಎಂ.ಸಿ ನೋಂದಣಿ ಹೊಂದಿರಬೇಕು.	1,10,000	02	60 ವರ್ಷ ಒಳಗಿರತಕ್ಕದ್ದು	
3	ಅರವಳಿಕೆ ತಜ್ಞ ವೈದ್ಯರು	ಅರವಳಿಕೆಯಲ್ಲಿ ಎಂ.ಡಿ/ಡಿ.ಎನ್.ಬಿ/ಡಿಪ್ಲೋಮ ಪಧವಿಯೊಂದಿಗೆ ಕೆ.ಎಂ.ಸಿ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.	1,10,000	02	60 ವರ್ಷ ಒಳಗಿರತಕ್ಕದ್ದು	
4	ರೇಡಿಯಾಲಜಿ ತಜ್ಞ ವೈದ್ಯರು	ಎಂ.ಡಿ ರೇಡಿಯಾಲಜಿ ಪಧವಿಯೊಂದಿಗೆ ಕೆ.ಎಂ.ಸಿ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.	1,10,000	01	60 ವರ್ಷ ಒಳಗಿರತಕ್ಕದ್ದು	
5	ಶುಶ್ರೂಷಣಾಧಿ –ಕಾರಿಗಳು	ಮಾನ್ಯತೆ ಪಡೆದ ನರ್ಸಿಂಗ್ ಶಾಲೆಯಲ್ಲಿ ಜಿಎನ್‌ಎಂ / ಬಿಎಸ್‌ಸಿ ವಿದ್ಯಾರ್ಹತೆ ಹಾಗೂ ಕೆಎನ್‌ಸಿ ನೋಂದಣಿ ಹೊಂದಿ ಕಂಪ್ಯೂಟರ್ ಸಾಕ್ಷರತೆ ಹೊಂದಿರಬೇಕು.	18,714/–	24	45 ವರ್ಷ ಒಳಗಿರತಕ್ಕದ್ದು	

- ಈ ಆಯ್ಕೆಯು / ನೇಮಕಾತಿಯು ಎನ್‌ಹೆಚ್‌ಎಂ ಮಾರ್ಗಸೂಚಿಗಳಂತೆ ರೋಸ್ಟರ್ ಕಮ್ ಮೆರಿಟ್ ಅನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು, ಈ ಗುತ್ತಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಮೀಸಲಾತಿ ಅಭ್ಯರ್ಥಿಗಳು ದೊರೆಯದೇ ಇರುವ ಸಂದರ್ಭದಲ್ಲಿ ಮಾತ್ರ ಸಾಮಾನ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು (ಸುತ್ತೋಲೆ ಸಂಖ್ಯೆ: ಆಕುಕ 25 ಎಂಎಸ್‌ಎನ್ 2016 ದಿ:14–03–2016), ಈ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾದರೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಈ ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ದಿನಾಂಕ:28–01–2026 ಬೆಳ್ಳಿಗೆ 11:00 ಗಂಟೆಗೆ ನೇರ ಸಂದರ್ಶನಕ್ಕೆ ತಮ್ಮ ಮೂಲ ದಾಖಲೆಗಳೊಂದಿಗೆ ಹಾಗೂ ನಕಲು ಪ್ರತಿಗಳೊಂದಿಗೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಆವರಣ, ಹಳೇ ಟಿ.ಬಿ ಆಸ್ಪತ್ರೆ, ಹಳೇ ಮದ್ರಾಸ್ ರಸ್ತೆ, ಸ್ವಾಮಿ ವಿವೇಕನಂದ ಮೆಟ್ರೋ ನಿಲ್ದಾಣದ ಹತ್ತಿರ, ಇಂದಿರಾನಗರ, ಬೆಂಗಳೂರು–38 ಇಲ್ಲಿಗೆ ಹಾಜರಾಗುವುದು ಹಾಗೂ ಈ ನೇಮಕಾತಿ ಪ್ರಕಟಣೆಯು ರೋಲಿಂಗ್ ಪ್ರಕಟಣೆ ಆಗಿರುವುದರಿಂದ ನಿಗದಿಪಡಿಸಿರುವ ನೇರ ಸಂದರ್ಶನದ ದಿನಾಂಕದಂದು ಭರ್ತಿ ಹಾಗದೆ ಇರುವ ಹುದ್ದೆಗಳನ್ನು ನಂತರ ಅರ್ಜಿ ಸಲ್ಲಿಸಿ ಸಂದರ್ಶನದ ಮುಖಾಂತರ ಹುದ್ದೆಗಳನ್ನು ಆಯ್ಕೆ ಮಾಡಲಾಗುವುದು, ಇದರ ಅವಧಿಯು ದಿ:31–03–2026ರ ವರೆಗೆ ಇರುತ್ತದೆ.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ

ಡಿಐಪಿಆರ್/ಸಿಪಿ/5112/ಸಿಎಲ್/2025–26

ಕೆನರಾ ಬ್ಯಾಂಕ್
ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ
ಎ.ಆರ್.ಎಂ.-II, ಶಾಖೆ, 2ನೇ ಮಹಡಿ, ಸರ್ಕಲ್ ಆಫೀಸ್, ಸ್ಪೆನ್ಸರ್ ಟವರ್ಸ್, ನಂ. 86, ಎಂ.ಜಿ. ರಸ್ತೆ, ಬೆಂಗಳೂರು – 560001
ದೂರವಾಣಿ : 080-25310099, 080-25310181, ಇ–ಮೇಲ್ : cb6298@canarabank.com

ಸ್ಥಿರಾಸ್ತಿಗಳ ಹರಾಜು ಮಾರಾಟ ಸೂಚನೆ

(ನಿಯಮ 8(6)ರ ಅಡಿಯಲ್ಲಿ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 2002

ಪೋವಿಜನ್ ನಿಯಮ 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನ ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು ಮತ್ತು ಖಾತರಿದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ, **ಕೆನರಾ ಬ್ಯಾಂಕಿನ ಎಂ.ಐ.ಡಿ. ಕಾರ್ಪೊರೇಟ್ ಶಾಖೆ, ಮೈಸೂರು** ಗೆ ಅಡಮಾನ ಇಡಲಾದ / ವಿಧಿಸಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿಯನ್ನು, **ಕೆನರಾ ಬ್ಯಾಂಕಿನ ಮೈಸೂರಿನ ಎಂ.ಐ.ಡಿ. ಕಾರ್ಪೊರೇಟ್ ಶಾಖೆಯ ಅಧಿಕೃತ ಅಧಿಕಾರಿಯು ಸ್ವಾಧೀನವನ್ನು** ತೆಗೆದುಕೊಂಡಿದ್ದಾರೆ, ಅದನ್ನು ಕೆಳಗೆ ತಿಳಿಸಲಾದ ಸಾಲಗಾರರಿಂದ ಬಾಕಿ ಬಾಕಿಗಳನ್ನು ವಸೂಲಿ ಮಾಡಲು **"ಎಲ್ಲಿದೆಯೋ ಹಾಗೆ", "ಏನಿದೆಯೋ ಹಾಗೆ", ಹೇಗಿದೆಯೋ ಹಾಗೆ"** ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಮೀಸಲು ಬೆಲೆ ಮತ್ತು ಅರ್ನಿಂಗ್ ಮನಿ ಠೇವಣಿಯನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಸಾಲಗಾರ(ರು) / ಜಾಮೀನುದಾರರ ಹೆಸರು ಮತ್ತು ವಿಳಾಸ	ಒಟ್ಟು ಹೊಣೆಗಾರಿಕೆಗಳು	ಸ್ಥಿರಾಸ್ತಿಯ ವಿವರಗಳು (ಮಾಲೀಕರ / ಅಡಮಾನುದಾರರ ಹೆಸರು)	ಹರಾಜಿನ ದಿನಾಂಕ & ಸಮಯ	ಮೀಸಲು ಬೆಲೆ & ಮುಂಗಡ ಹಣ ಠೇವಣಿ (ಇ.ಎಂ.ಡಿ.) ದಿನಾಂಕ & ಸಮಯ	ಬಿಡ್ ಹೆಚ್ಚಳ ಮೊತ್ತ
1. ಮೆ॥ ಸ್ವಾಭಿಮಾನ್ ಆಸ್ಪತ್ರೆ ಮಾಲೀಕರು : ಡಾ. ಕೆ ಎಸ್ ವೈಜಯಂತಿ ಸರ್ವೇ ನಂ. 85/4ಬಿ, ಬಟ್ಟಿಗೆರೆ ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ – 572132. **ಹಾಗೂ ಇಲ್ಲಿ : ಮೆ॥ ಸ್ವಾಭಿಮಾನ್ ಆಸ್ಪತ್ರೆ** # 109, 2ನೇ ಮಹಡಿ, 8ನೇ ಮುಖ್ಯ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560055. **3. ಶ್ರೀ ಸುಬ್ರಮಣ್ಯಂ ಎಸ್ ಬಿನ್ ಸೇತುರಾಮನ್** ನಂ. 19, 2ನೇ ಮೇನ್, 5ನೇ ಕ್ರಾಸ್, ಬಾಹುಬಲಿ ನಗರ, ಜಾಲಹಳ್ಳಿ, ಬೆಂಗಳೂರು – 560013. **4. ಡಾ. ಕೆ ಎಸ್ ವೈಜಯಂತಿ ಕೋಂ. ಸುಬ್ರಮಣ್ಯಂ ಎಸ್** ನಂ. 19, ಜೇನುಗೋಡು, 2ನೇ ಮೇನ್, 5ನೇ ಕ್ರಾಸ್, ಬಾಹುಬಲಿ ನಗರ, ಜಾಲಹಳ್ಳಿ, ಬೆಂಗಳೂರು – 560013. **ಹಾಗೂ ಇಲ್ಲಿ : 5. ಶ್ರೀ ಸುಬ್ರಮಣ್ಯಂ ಎಸ್** ನಂ. 109, ರತ್ನಂ ಕಾಂಪ್ಲೆಕ್ಸ್, 2ನೇ ಮಹಡಿ, 8ನೇ ಮೇನ್, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560055.	ರೂ. 16,76,24,996.14 (ರೂಪಾಯಿ ಹದಿನಾರು ಕೋಟಿ ಎಪ್ಪತ್ತಾರು ಲಕ್ಷ ಇಪ್ಪತ್ನಾಲ್ಕು ಸಾವಿರ ಒಂಬೈನೂರ ತೊಂಭತ್ತಾರು ಮತ್ತು ಹದಿನಾಲ್ಕು ಪೈಸೆ ಮಾತ್ರ) ಹಾಗೂ ಹೆಚ್ಚುವರಿ ಬಡ್ಡಿ ಇದರೊಂದಿಗೆ ದಿನಾಂಕ : 16-01-2026 ರಿಂದ ಇತರೆ ವೆಚ್ಚಗಳು, ಖರ್ಚುಗಳು, ಇತ್ಯಾದಿ.	(1) ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರಾಸ್ತಿ ವಸತಿ ಕಟ್ಟಡ, ಬಸವೇಶ್ವರ ನಿಲಯ, ಇದರ ಕಾರ್ಪೋರೇಷನ್ ಸೈಟ್ ನಂ. 6ರ ವಾರ್ಡ್ ನಂ. 2, ಸೈಟ್ ನಂ. 22, ಸರ್ವೇ ನಂ. 74/1ರಲ್ಲಿ ಸ್ಥಾಪಿತ, ಸ್ಥಿರಾಸ್ತಿಯು ಜಾಲಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಾಹುಬಲಿ ನಗರ. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ 55/2=27.50', ಉತ್ತರದಿಂದ ದಕ್ಷಿಣಕ್ಕೆ 48' ರಲ್ಲಿ ನಿರ್ಮಾಣದೊಂದಿಗೆ, ಮೊದಲ ಮತ್ತು ಎರಡನೇ ಮಹಡಿ, ಮೊಸಾಯಿಕ್ ಮತ್ತು ಸಾಲ್ ಕಿಟಕಿಗಳನ್ನು ಹೊಂದಿರುವ 21 ಚೌಕಗಳ ಕಟ್ಟಡ ಮತ್ತು ಆಸ್ತಿ : **ಶ್ರೀಮತಿ ವೈಜಯಂತಿ ಸುಬ್ರಮಣಿಯನ್ ಇವರ ಹೆಸರಿನಲ್ಲಿ ಇದೆ. ಚಕ್ಕುಬಂಧಿ :- ಪೂರ್ವಕ್ಕೆ :** ಶ್ರೀಕಾಂತಾಚಾರಿಯವರ ಆಸ್ತಿ, **ಪಶ್ಚಿಮಕ್ಕೆ :** ಸವೇ ನಂ. 73 ರಲ್ಲಿರುವ ಆಸ್ತಿ ಮತ್ತು ಮಾರಾಟಗಾರರಿಂದ ಈಗಾಗಲೇ ಪರಭಾರೆ ಮಾಡಲಾದ ಆಸ್ತಿ, **ಉತ್ತರಕ್ಕೆ :** ಮಹಾದೇವಯ್ಯನವರ ಆಸ್ತಿ, **ದಕ್ಷಿಣಕ್ಕೆ :** ರಸ್ತೆ (1) ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರಾಸ್ತಿಯ ನಂ. 12ಎ (ಪೂರ್ವ ಭಾಗ), ಇದರ ಕಾರ್ಪೋರೇಷನ್ ಸೈಟ್ ನಂ. 2, ಜಾಲಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಾಹುಬಲಿ ನಗರ. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ 31 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ 36+37 ಅಡಿ ಮತ್ತು ಇದರ **ಚಕ್ಕುಬಂಧಿ :- ಪೂರ್ವಕ್ಕೆ :** ಖಾಸಗಿ ಆಸ್ತಿ, **ಪಶ್ಚಿಮಕ್ಕೆ :** ಶ್ರೀ ಆರ್. ಶಶಿಧರ್ ಅವರ ಆಸ್ತಿ, **ಉತ್ತರಕ್ಕೆ :** ಮಹೇಂದ್ರನಾಥ ಅವರ ಆಸ್ತಿ, **ದಕ್ಷಿಣಕ್ಕೆ :** ರಸ್ತೆ. ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರಾಸ್ತಿಯ ನಂ. 12ಎ (ಪಶ್ಚಿಮ ಭಾಗ), ಇದರ ಕಾರ್ಪೋರೇಷನ್ ಸೈಟ್ ನಂ. 2, ಜಾಲಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಾಹುಬಲಿ ನಗರ. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ 36+35 ಅಡಿ ಮತ್ತು ಇದರ **ಚಕ್ಕುಬಂಧಿ :- ಪೂರ್ವಕ್ಕೆ :** ಶ್ರೀ ನರೇಂದ್ರಬಾಬು ಅವರಿಗೆ ಸೇರಿದ ಆಸ್ತಿ, **ಪಶ್ಚಿಮಕ್ಕೆ :** ಆಸ್ತಿ ನಂ. 12, **ಉತ್ತರಕ್ಕೆ :** ಮಹೇಂದ್ರನಾಥ ಅವರ ಆಸ್ತಿ, **ದಕ್ಷಿಣಕ್ಕೆ :** ರಸ್ತೆ (3) ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಭೂಮಿ ಅಳತೆ 45 ಎಕರೆಗಳು, ಸ್ಥಿರಾಸ್ತಿಯು ವಿವಿಧ ಸರ್ವೇ ನಂ.ಗಳಲ್ಲಿ ವಿವರಿಸಲಾಗಿದೆ ಇದರ ಮಾಲ್ಯಾಂಕನ ವರದಿ ಜೊತೆಗೆ ಕಟ್ಟಡವು ಸರ್ವೇ ನಂ. 85/4ಬಿ (ಪರಿವರ್ತಿತ ಭೂಮಿ) ಬಟ್ಟಿಗೆರೆ ಗ್ರಾಮ, ಪುವಾರ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ – 572132 ಇಲ್ಲಿ ನೆಲೆಗೊಂಡಿದೆ. **ಸ್ಥಿರಾಸ್ತಿಯು ವೈಜಯಂತಿ .ಕೆ.ಎಸ್. ಇವರ ಹೆಸರಿನಲ್ಲಿದೆ.**	25.02.2026 – ಮಧ್ಯಾಹ್ನ 01.00 ರಿಂದ 03.00 ರವರೆಗೆ (ಜೊತೆಗೆ ಮಾರಾಟದ ಮುಕ್ತಾಯದವರೆಗೆ ಪ್ರತಿಯೊಂದಕ್ಕೂ 5 ನಿಮಿಷಗಳ ಅವಧಿಯ ಅನಿಯಮಿತ ವಿಸ್ತರಣೆ)	**ಆಸ್ತಿ ನಂ. 1 : ಮೀಸಲು ಬೆಲೆ :** ರೂ. 247.24 ಲಕ್ಷಗಳು **ಇ.ಎಂ.ಡಿ. :** ರೂ. 24.73 ಲಕ್ಷಗಳು **ಆಸ್ತಿ ನಂ. 2 : ಮೀಸಲು ಬೆಲೆ :** ರೂ. 189.96 ಲಕ್ಷಗಳು **ಇ.ಎಂ.ಡಿ. :** ರೂ. 19.00 ಲಕ್ಷಗಳು **ಆಸ್ತಿ ನಂ. 3 : ಮೀಸಲು ಬೆಲೆ :** ರೂ. 687.62 ಲಕ್ಷಗಳು **ಇ.ಎಂ.ಡಿ. :** ರೂ. 68.76 ಲಕ್ಷಗಳು 24.02.2026 ಮೊದಲು ಅಥವಾ ನಂತರ	**ಹೆಚ್ಚಳ ಮೊತ್ತ** ರೂ. 1,00,000/- **ಹೊಣೆಗಾರಿಗೆಗಳು : ಬ್ಯಾಂಕ್‌ಗೆ ತಿಳಿದಂತೆ ಯಾವುದೂ ಇಲ್ಲ**

ಸೂಚನೆ : ಎಲ್ಲಾ ಆಸ್ತಿಗಳು ಬ್ಯಾಂಕಿನ ಸಾಂಕೇತಿಕ ಸ್ವಾಧೀನದಲ್ಲಿವೆ ಮತ್ತು "ಎಲ್ಲ ಎಲ್ಲಿದೆಯೋ ಹಾಗೆಯೇ" & "ಎಲ್ಲ ಏನು ಇದೆಯೋ ಹಾಗೆಯೇ" ಎಂಬ ಆಧಾರದ ಮೇಲೆ ಮಾರಾಟ ಮಾಡಲಾಗುತ್ತಿದೆ.

ಮಾರಾಟ ಸೂಚನೆಯ ವಿವರವಾದ ನಿಯಮಗಳು ಮತ್ತು ಷರತ್ತುಗಳು

ಎ) ಹರಾಜು / ಬಿಡ್ಡಿಂಗ್ "ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್" ಮೂಲಕ ವೆಬ್‌ಸೈಟ್ : https://baanknet.com/ ಮೂಲಕ ಮಾತ್ರ ನಡೆಯಲಿದೆ. ಇ–ಹರಾಜು ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಬಿಡ್ಡರ್‌ಗಳು ವಿವರವಾದ ನಿಯಮಗಳಿಗಾಗಿ ವೆಬ್‌ಸೈಟ್ ಅನ್ನು ಪರಿಶೀಲಿಸಲು ಸೂಚಿಸಲಾಗಿದೆ.

ಬಿ) ಅಧಿಕೃತ ಅಧಿಕಾರಿಯೊಂದಿಗೆ ಪೂರ್ವ ನೇಮಕಾತಿಯೊಂದಿಗೆ ಆಸ್ತಿಯನ್ನು ಪರಿಶೀಲಿಸಬಹುದು.

ಸಿ) ಆಸ್ತಿಯನ್ನು ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತದೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ತಮ್ಮ ಕೊಡುಗೆಯನ್ನು ಇನ್ನಷ್ಟು ಸುಧಾರಿಸಬಹುದು.

ಡಿ) **ಮೀಸಲು ಬೆಲೆಯ ಶೇ. 10% ರಷ್ಟು ಇಎಂಡಿ ಮೊತ್ತವನ್ನು ಮೆ॥ ಪಿಎಸ್ ಬಿ ಅಲಯನ್ಸ್ ಪ್ರೈವೇಟ್ ಲಿಮಿಟೆಡ್ (ಬ್ಯಾಂಕ್ ನೆಟ್) ಪೋರ್ಟಲ್‌ನ ಇ-ವ್ಯಾಲೆಟ್ ನಲ್ಲಿ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮೂಲಕ ಖಾತೆಯ ವಿವರಗಳಲ್ಲಿ ಎಂದು ಚಲನ್ ನಲ್ಲಿ ಉಲ್ಲೇಖಿಸಲಾಗಿದೆ RTGS / NEFT ಮೂಲಕ ಇಎಂಡಿಯನ್ನು ಠೇವಣಿ ಮಾಡಬೇಕು.**

ಇ) ಇ.ಎಂ.ಡಿ. ಮೊತ್ತವನ್ನು ಪಾವತಿಸಿದ ನಂತರ, ಉದ್ದೇಶಿತ ಬಿಡ್ ದಾರರು ಈ ಕೆಳಗಿನ ದಾಖಲೆಗಳ / ವಿವರಗಳ ನಕಲನ್ನು ಮೇಲ್ಕಂಡ **ದಿನಾಂಕ : 24.02.2026 ನಂತರ ಅಥವಾ ಮೊದಲು ಕೆನರಾ ಬ್ಯಾಂಕ್, ಎಆರ್‌ಎಂ-II ಶಾಖೆ, ಅವರಿಗೆ ಬೈಹ್ಯಾಂಡ್ ಸಲ್ಲಿಸಬಹುದು.**

(i) ಇಎಂಡಿ ಮೊತ್ತಕ್ಕೆ ಬೇಡಿಕೆ ಡ್ರಾಫ್ಟ್ / ಪೇ ಆರ್ಡರ್. RTGS / NEFT ಮೂಲಕ ಪಾವತಿಸಿದರೆ, UTR ಸಂಖ್ಯೆಯೊಂದಿಗೆ ಅದರ ಸ್ವೀಕೃತಿ ರಶೀದಿಯನ್ನು ಪಡೆಯಬಹುದು.

(ii) ಬಿಡ್‌ದಾರರು ಆದಾಯ ತೆರಿಗೆ ಇಲಾಖೆಯಿಂದ ನೀಡಲ್ಪಟ್ಟ ಪಾನ್ ಕಾರ್ಡ್ ಪ್ರತಿಯನ್ನು ಮತ್ತು ಅವನ / ಅವಳ ಗುರುತಿನ ಪುರಾವೆ ಮತ್ತು ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್ ನಂತಹ ನಿವಾಸದ ಪುರಾವೆಗಳನ್ನು ಸಹ ಲಗತ್ತಿಸಬೇಕು. ಆದಾಗ್ಯೂ, ಬಿಡ್ ಮೊತ್ತದ ಶೇ. 25% ರ ಬಾಕಿ ಮೊತ್ತವನ್ನು ಪಾವತಿಸುವ ಸಮಯದಲ್ಲಿ ಯಶಸ್ವಿ ಬಿಡ್ಡುದಾರರು ಈ ದಾಖಲೆಗಳನ್ನು ಮೂಲದಲ್ಲಿ ಬ್ಯಾಂಕ್‌ಗೆ ಸಲ್ಲಿಸಬೇಕಾಗುತ್ತದೆ.

(iii) ಬಿಡ್ ಫಾರ್ಮ್ ಸಲ್ಲಿಸಬೇಕು.

ಉದ್ದೇಶಿತ ಬಿಡ್ಡುದಾರರು ತಮ್ಮ ಹೆಸರನ್ನು ಪೋರ್ಟಲ್ https://baanknet.com/ ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. ನಿರೀಕ್ಷಿತ ಬಿಡ್ಡುದಾರರು ಸೇವಾ ಪೂರೈಕೆದಾರರಿಂದ ಹರಾಜಿನ ಕುರಿತು ಆನ್‌ಲೈನ್ ತರಬೇತಿಯನ್ನು ಪಡೆಯಬಹುದು, **ಮೆ॥ ಪಿಎಸ್‌ಬಿ ಅಲೈಯನ್ಸ್ (ಬ್ಯಾಂಕ್‌ನೆಟ್)** ಇಮೇಲ್ : support.baanknet@psballiance.com ವಿಫಲವಾದ ಬಿಡ್ಡುದಾರಿಂದ ಠೇವಣಿ ಮಾಡಿದ ಇಎಂಡಿಯನ್ನು ಅವರಿಗೆ ಮರುಪಾವತಿಸಲಾಗುತ್ತದೆ. ಇಎಂಡಿ ಯಾವುದೇ ಬಡ್ಡಿಯನ್ನು ಹೊಂದಿರುವುದಿಲ್ಲ.

ಎಫ್) ಮೇಲೆ ತಿಳಿಸಿದಂತೆ ಮೀಸಲು ಬೆಲೆಯಲ್ಲಿ ಹರಾಜು ಪ್ರಾರಂಭವಾಗುತ್ತದೆ. ಬಿಡ್ ದಾರರು ತಮ್ಮ ಆಫರ್‌ಗಳನ್ನು **ಮೇಲೆ ತಿಳಿಸಿದ 'ಆನ್‌ಲೈನ್'** ಹರಾಜಿನ ಮುಕ್ತಾಯದ ಮೇಲೆ ಅತಿ ಹೆಚ್ಚು ಬಿಡ್‌ನ್ನು **ರೂ. 1,00,000/-** ಮೊತ್ತವನ್ನು (ಮೀಸಲು ಬೆಲೆಗಿಂತ ಹೆಚ್ಚು) ಸಲ್ಲಿಸುವ ಬಿಡ್ಡರ್ ಅನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ಯಶಸ್ವಿ ಬಿಡ್ ದಾರರ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ. ಭದ್ರತಾ ಸಾಲದಾತರಿಂದ ಅದೇ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

ಜಿ) ಯಶಸ್ವಿಯಾದ ಟೆಂಡರುದಾರರು ಆತನ / ಆಕೆಯ ಪರವಾಗಿ ಟೆಂಡರ್ ತೀರ್ಮಾನದ ನಂತರ ಅದೇ ದಿನ ತಕ್ಷಣ ಮಾರಾಟ ಬೆಲೆಯ ಶೇ. 25% ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು. ಬಾಕಿ ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಯಶಸ್ವಿಯಾದ ಟೆಂಡರುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಠೇವಣಿ ಹಣವನ್ನು ಅಧಿಕೃತ ಅಧಿಕಾರಿ ಇವರಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಮೊತ್ತವನ್ನು ಕೆನರಾ ಬ್ಯಾಂಕ್‌ನ ಅಧಿಕೃತ ಅಧಿಕಾರಿಯ ಪರವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಠೇವಣಿ ಇಡಬೇಕು. **ಎಆರ್.ಎಂ– II ಶಾಖೆ ಅಥವಾ ಕೆನರಾ ಬ್ಯಾಂಕ್, ಎಆರ್.ಎಂ– II ಶಾಖೆ, ಖಾತೆ ಖಾತೆಯ ಕ್ರೆಡಿಟ್‌ಗೆ RTGS / NEFT / ನಿಧಿ ವರ್ಗಾವಣೆಯ ಮೂಲಕ ಠೇವಣಿ ಮಾಡಬೇಕು. ನಂ. 209272434, ಐಎಫ್‌ಎಸ್‌ಸಿ ಕೋಡ್ : CNRB0006298.**

ಹೆಚ್) **ರೂ. 50 ಲಕ್ಷಗಳು (ಐವತ್ತು ಲಕ್ಷ ರೂಪಾಯಿಗಳು)** ಮತ್ತು ಅದಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕಾಗಿ, ಯಶಸ್ವಿ ಬಿಡ್‌ದಾರರು ಮಾರಾಟದ ಆದಾಯದ ಮೇಲೆ ದರದಲ್ಲಿ ಶೇ. 1% ಟಿಡಿಎಸ್ ಅನ್ನು ಕಡಿತಗೊಳಿಸಬೇಕು ಮತ್ತು ಟಿಡಿಎಸ್ ಪ್ರಮಾಣಪತ್ರದ ಮೂಲ ರಸೀದಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು.

ಐ) ಎಲ್ಲಾ ಕನ್ವೇಯನ್ಸ್, ಸ್ಟಾಂಪ್ ಡ್ಯೂಟಿ / ಜಿಎಸ್‌ಟಿ / ರಿಜಿಸ್ಟ್ರೇಷನ್ ಚಾರ್ಜ್‌ಗಳು ಎಲ್ಲಾ ಟ್ಯಾಕ್ಸ್‌ಗಳು, ಕಾನೂನು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಇತ್ಯಾದಿಯಂತಹ ಎಲ್ಲಾ ಇತರೆ ಬಾಕಿ ಖರ್ಚುಗಳನ್ನು ಯಶಸ್ವಿ ಬಿಡ್ಡುದಾರರೇ ಭರಿಸಬೇಕು.

ಜೆ) ಯಾವುದೇ ಕಾರಣವನ್ನು ನೀಡದೆ ಇ–ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ / ರದ್ದು ಮಾಡುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ.

ಕೆ) ಇಂಟರ್ನೆಟ್‌ಗೆ ಪ್ರವೇಶವನ್ನು ಹೊಂದಿರದ ಆದರೆ ಇ–ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಬಿಡ್‌ದಾರರು ಇದ್ದರೆ, ಅವರು ಸಂಬಂಧಪಟ್ಟ **ಕೆನರಾ ಬ್ಯಾಂಕ್ ಸರ್ಕಲ್ ಕಚೇರಿ, ಬೆಂಗಳೂರು ಅಥವಾ ಎಆರ್.ಎಂ– II ಶಾಖೆ ಬೆಂಗಳೂರು** ಇವರನ್ನು ಸಂಪರ್ಕಿಸಬಹುದು, ಅನುಕೂಲಕರ ಕೇಂದ್ರವಾಗಿ ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಾರೆ.

ಎಲ್) ಬಿಡ್ಡುದಾರರು ಶೀರ್ಷಿಕೆ, ವ್ಯಾಪ್ತಿ, ಪ್ರದೇಶದ ಬಾಕಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಆಸ್ತಿಯ ಸರಿಯಾದ ಶೀರ್ಷಿಕೆ ಮತ್ತು ಭೌತಿಕ ಪರಿಶೀಲನೆಯನ್ನು ಮಾಡಬೇಕು. ಬಿಡ್ ಸಲ್ಲಿಸಿದ ನಂತರ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : **ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಎ.ಆರ್.ಎಂ.– II ಶಾಖೆ,** (9113092975, 8921102717, 9201460154, 9483544116, 8709675503 ಮತ್ತು 080-25310181) ಇ–ಮೇಲ್ : cb6298@canarabank.com ಅಥವಾ ಸೇವಾ ಪೂರೈಕೆದಾರರು **ಮೆ॥ ಪಿಎಸ್‌ಬಿ ಅಲಯನ್ಸ್ ಪ್ರೈವೇಟ್ ಲಿಮಿಟೆಡ್ (ಬ್ಯಾಂಕ್‌ನೆಟ್),** ಇಮೇಲ್ : support.baanknet@psballiance.com

ವಿಶೇಷ ಸೂಚನೆ / ಎಚ್ಚರಿಕೆ :

ಕೊನೆಯ ನಿಮಿಷಗಳು / ಸೆಕೆಂಡುಗಳಲ್ಲಿ ಬಿಡ್ಡಿಂಗ್ ಅನ್ನು ತಮ್ಮ ಸ್ವಂತ ಆಸಕ್ತಿಯಿಂದ ಬಿಡ್‌ದಾರರು ತಪ್ಪಿಸಬೇಕು. ಅಂತಹ ಸಂದರ್ಭಗಳಲ್ಲಿ ಯಾವುದೇ ತೊಂದರೆ ಅಥವಾ ವೈಫಲ್ಯ (ಇಂಟರ್ನೆಟ್ ವೈಫಲ್ಯ, ವಿದ್ಯುಚ್ಛಕ್ತಿ ವೈಫಲ್ಯ, ಇತ್ಯಾದಿ) ಉಂಟಾದಲ್ಲಿ ಗುತ್ತಿಗೆದಾರರು ಅಥವಾ ಮಾರಾಟಗಾರರ ಭಾಗವಾಗಿ ಕೆನರಾ ಬ್ಯಾಂಕ್ ಅಥವಾ ಸೇವಾ ಪೂರೈಕೆದಾರರು ಜವಾಬ್ದಾರರಾಗಿರುವುದಿಲ್ಲ. ಅಂತಹ ಅನಿಶ್ಚಿತ ಪರಿಸ್ಥಿತಿಯನ್ನು ತಡೆಗಟ್ಟಲು, ವಿದ್ಯುತ್ ಸರಬರಾಜು ಮತ್ತು ಅಗತ್ಯವಿರುವ ಎಲ್ಲ ಅಗತ್ಯವಾದ ವ್ಯವಸ್ಥೆಗಳನ್ನು / ಪರ್ಯಾಯಗಳನ್ನು ಮಾಡಲು ಬಿಡ್ ದಾರರನ್ನು ಕೋರಲಾಗುತ್ತದೆ. ಅದ್ದರಿಂದ ಅವರು ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಸಮರ್ಥರಾಗಿದ್ದಾರೆ ಮತ್ತು ಯಶಸ್ವಿಯಾಗಿ ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

ದಿನಾಂಕ : 19.01.2026
ಸ್ಥಳ : ಬೆಂಗಳೂರು ।
ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಸಮಾಚಾರ ಸಣ್ಣದಲ್ಲ

ಫೆ.7ಕ್ಕೆ ಜೈಮಿನಿ ಭಾರತದ ಉಪನ್ಯಾಸ

ಬೆಂಗಳೂರು: ಹಿರಿಯ ವಿದ್ವಾಂಸ ಡಾ.ಪಾವಗಡ ಪ್ರಕಾಶ್ ಅವರಿಂದ ಜೈಮಿನಿ ಭಾರತದ ಉಪನ್ಯಾಸ ಮಾಲಿಕೆ ಫೆ.7ರವರೆಗೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಜ.15ರಿಂದ ಬೆಂಗಳೂರಿನ ಎನ್.ಆರ್ ಕಾಲೋನಿಯಲ್ಲಿರುವ ರಾಮ ಮಂದಿರದಲ್ಲಿ ಆರಂಭವಾಗಿದೆ. ನಿತ್ಯ ಸಂಜೆ 5.45ರಿಂದ 8 ಗಂಟೆಯವರೆಗೆ ನಿತ್ಯ ಉಪನ್ಯಾಸ ಮಾಲಿಕೆ ಆಯೋಜಿಸಲಾಗಿದೆ. ಪ್ರಕಾಶ್ ಪಾವಗಡ ಅವರು ಕವಿ ಲಕ್ಷ್ಮೀಶ ರಚಿಸಿರುವ ಜೈಮಿನಿ ಭಾರತದ ಅನನ್ಯ ಕಥಾ ಸರಣಿ ಉಪನ್ಯಾಸ ಮಾಲಿಕೆ ನೀಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಸಿಎಂಆರ್ ತಾಂತ್ರಿಕ ಕಾಲೇಜು ರಜತ ಮಹೋತ್ಸವ

ಬೆಂಗಳೂರು: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ 25ನೇ ವರ್ಷದ ರಜತ ಮಹೋತ್ಸವ, ಇನ್‌ಕ್ಯುಬೇಶನ್ ಸೆಂಟರ್, ಆಡಿಟೋರಿಯಂ ಉದ್ಘಾಟನೆ ಕಾರ್ಯಕ್ರಮ ಜ.21 ರಂದು ಮ.2ಕ್ಕೆ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪ್ರಕಟಣೆಗೆ ತಿಳಿಸಿದೆ. ಈ ವೇಳೆ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಥ್, ಎನ್‌ಪಿಎಸ್ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಪಿ ಗೋಪಾಲಕೃಷ್ಣ, ಮಾಜಿ ರಾಜ್ಯಸಭಾ ಸದಸ್ಯಡಾ. ಕೆ. ಸಿ. ರಾಮಮೂರ್ತಿ, ಸಿಎಂಆರ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಸಬಿತಾ ರಾಮಮೂರ್ತಿ, ಸಹ-ಕುಲಾಧಿಪತಿ ಜಯದೀಪ್ ಕೆ.ಆರ್. ರೆಡ್ಡಿ, ಉಪಾಧ್ಯಕ್ಷ ಡಾ. ತ್ರಿಸ್ತಾ ರಾಮಮೂರ್ತಿ, ಕಾರ್ಯದರ್ಶಿ ಕೆ. ಸಿ. ಜಗನ್ನಾಥ ರೆಡ್ಡಿ, ಕಾರ್ಯನಿರ್ವಹಕ ನಿರ್ದೇಶಕಿ ಶ್ರೇಯಾ ರೆಡ್ಡಿ, ಸಿಎಂಆರ್ ಐಟಿ ಪ್ರಾಂಶುಪಾಲ ಡಾ. ಸಂಜಯ್ ಜೈನ್ ಮತ್ತು ಉಪ ಪ್ರಾಂಶುಪಾಲ ಡಾ. ಬಿ. ನರಸಿಂಹಮೂರ್ತಿ ಸೇರಿದಂತೆ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಗೆ ತಿಳಿಸಿದೆ.

ಕಾಮಗಾರಿಗಳಿಗೆ ಜನರ ಸಹಕಾರ ಅಗತ್ಯ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಪಾಲಿಕೆ ವ್ಯಾಪ್ತಿಯ ಎಲ್ಲಾ ಇಲಾಖೆಗಳ ಸಮನ್ವಯ ಸಭೆಯನ್ನು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯಲ್ಲಿ ಮಾತನಾಡಿದ ಆಯುಕ್ತರು, ಸಂಜಯ ನಗರ ಮುಖ್ಯ ರಸ್ತೆಯಲ್ಲಿ ನಿರ್ವಹಿಸಲಾಗುತ್ತಿರುವ ಕಾಮಗಾರಿಯ ಬಗ್ಗೆ ಜಲಮಂಡಳಿ ಅಧಿಕಾರಿಗಳು ಗಮನ ಹರಿಸಬೇಕು. ಲಾಝುರ್ ರಸ್ತೆ ಮತ್ತು ಮಾಸ್ಕ್ ರಸ್ತೆಗಳಲ್ಲಿ ಬಿ-ಸ್ಮೈಲ್ ವಿಭಾಗದ ವತಿಯಿಂದ ನಿರ್ವಹಿಸಲಾಗುತ್ತಿರುವ ಕಾಮಗಾರಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಸೂಚಿಸಿದರು. ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಪಾಲಿಕೆಯಿಂದ ನೀಡಿರುವ ಮನವಿ ಬಗ್ಗೆ ಗಮನಹರಿಸಬೇಕು. ಇಲಾಖೆಯಿಂದ ಸಂಪರ್ಕ ಕಡಿತಗೊಳಿಸಿರುವ ಕುರಿತು ವಿವರಗಳನ್ನು ಪಾಲಿಕೆಗೆ ಸಲ್ಲಿಸಬೇಕು. ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಸಲು ಇರುವ ಕಾನೂನುಗಳು ಮತ್ತು ಷರತ್ತುಗಳ ಕುರಿತ ಮಾಹಿತಿಯನ್ನು ಪಾಲಿಕೆಯೊಂದಿಗೆ ಜಲಮಂಡಳಿ ಅಧಿಕಾರಿಗಳು ಹಂಚಿಕೊಳ್ಳಬೇಕು ಎಂದು ಸೂಚನೆ ನೀಡಿದರು. ಕೆಐಎ ರಸ್ತೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ಸ್ಥಿತಿಗತಿಯನ್ನು ಪರಿಶೀಲಿಸಬೇಕು. ಬಿಎಂಆರ್‌ಸಿಎಲ್ ವತಿಯಿಂದ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಿ ಸಮನ್ವಯ ಸಾಧಿಸುವ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ದಡಾರ-ರುಬೆಲ್ಲಾ ಲಸಿಕಾ ಅಭಿಯಾನ

ಬೆಂಗಳೂರು: ಲಸಿಕಾ ದಡಾರ-ರುಬೆಲ್ಲಾ ಖಾಯಿಲೆಯಿಂದ ಮಕ್ಕಳನ್ನು ರಕ್ಷಿಸುವ ಉದ್ದೇಶದಿಂದ, ಸಾರ್ವತ್ರಿಕ ಕಾರ್ಯಕ್ರಮದಡಿಯಲ್ಲಿ ಮಕ್ಕಳಿಗೆ 9 ರಿಂದ 11 ತಿಂಗಳ ವಯಸ್ಸಿನಲ್ಲಿ ಮೊದಲನೇ ಡೋಸ್ ಹಾಗೂ 16 ರಿಂದ 24 ತಿಂಗಳ ವಯಸ್ಸಿನಲ್ಲಿ ಎರಡನೇ ಡೋಸ್ ದಢಾರ ರುಬೆಲ್ಲಾ ಲಸಿಕೆಯನ್ನು ನೀಡಲಾಗುತ್ತಿದೆ ಎಂದು ಜಿಬಿಎ ಆರೋಗ್ಯ ಇಲಾಖೆ ತಿಳಿಸಿದೆ. ಭಾರತ ಸರಕಾರವು 2026ರ ಅಂತ್ಯದೊಳಗೆ ದಢಾರ-ರುಬೆಲ್ಲಾ ಮತ್ತು ರುಬೆಲ್ಲಾ ರೋಗಗಳ ಸಂಪೂರ್ಣ ನಿರ್ಮೂಲನೆಗೆ ಬದ್ದವಾಗಿದ್ದು, ಈ ಮಹತ್ವದ ಗುರಿ ಸಾಧನೆಯಲ್ಲಿ ರಾಜ್ಯದ ಪಾತ್ರ ಅತ್ಯಂತ ಪ್ರಮುಖವಾಗಿದೆ. ಈ ಹಿನ್ನೆಲೆಯಲ್ಲಿ ದಢಾರ-ರುಬೆಲ್ಲಾ ನಿರ್ಮೂಲನಾ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಜಿಬಿಎ ವಿಶೇಷ ಗಮನಹರಿಸಿದೆ. ಜಿಬಿಎ ವ್ಯಾಪ್ತಿಯಲ್ಲಿರುವ 145 ಯೋಜನಾ ಘಟಕಗಳ ದಢಾರ-ರುಬೆಲ್ಲಾ ಪಾಕ್ಷಿಕ ಲಸಿಕಾ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ದಢಾರ-ರುಬೆಲ್ಲಾ ವಿಶೇಷ ಪಾಕ್ಷಿಕ ಲಸಿಕಾ ಅಭಿಯಾನದಲ್ಲಿ ಒಟ್ಟು 1,114 ಲಸಿಕಾ ಕೇಂದ್ರಗಳನ್ನು 3,005 ವಲಸೆ ತಾಣಗಳಲ್ಲಿ ಯೋಜಿಸಲಾಗಿದೆ. 0 ರಿಂದ 5 ವರ್ಷದೊಳಗಿನ ಮಕ್ಕಳಿಗೆ ಯಾವುದೇ ಕಾರಣಗಳಿಂದ ಈವರೆಗೆ ಲಸಿಕೆ ಪಡೆಯಲು ವಿಳಂಬವಾಗಿದ್ದಲ್ಲಿ ಅಥವಾ ಲಸಿಕೆ ಪಡೆಯದೇ ಇದ್ದಲ್ಲಿ, ಪೋಷಕರು ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕೆಂದು ಜಿಬಿಎ (ಆರೋಗ್ಯ ಇಲಾಖೆ) ಪ್ರಕಟಣೆ ಹೊರಡಿಸಿದೆ. ನಿಮ್ಮ ಮಕ್ಕಳಿಗೆ ಲಸಿಕೆ ಕೊಡಿಸಿ ಆರೋಗ್ಯವಂತರನ್ನಾಗಿಸಿ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಮತದಾರರ ಕರಡು ಪಟ್ಟಿ ಬಿಡುಗಡೆಗೊಳಿಸಿದ ಚುನಾವಣಾ ಆಯೋಗ | ಬೆಂಗಳೂರು ಪಶ್ಚಿಮದಲ್ಲಿ ಗರಿಷ್ಠ, ಪೂರ್ವದಲ್ಲಿ ಕನಿಷ್ಠ

ಜಿಬಿಎ ವ್ಯಾಪ್ತಿಯಲ್ಲಿ 88 ಲಕ್ಷ ಮತದಾರರು

ಬೆಂಗಳೂರು: ಬಹುನಿರೀಕ್ಷಿತ ಗ್ರೇಟರ್ ಬೆಂಗಳೂರು ಚುನಾವಣೆಗೆ ರಾಜಕೀಯ ಪಕ್ಷಗಳು ಸಜ್ಜಾಗುತ್ತಿರುವ ನಡುವೆಯೇ, ರಾಜ್ಯ ಚುನಾವಣಾ ಆಯೋಗ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿದ್ದು, ಇದರ ಪ್ರಕಾರ ಸದ್ಯ ಜಿಬಿಎ ಚುನಾವಣೆಯಲ್ಲಿ 88 ಲಕ್ಷ ಜನರು ಮತದಾನದ ಹಕ್ಕನ್ನು ಪಡೆದಿದ್ದಾರೆ.

ಜಿಬಿಎ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ಸುದ್ದಿಗೋಷ್ಠಿಯಲ್ಲಿ, ಜಿಬಿಎ ವ್ಯಾಪ್ತಿಯಲ್ಲಿ ನಡೆಯಲಿರುವ ಚುನಾವಣೆ ಅಂಗವಾಗಿ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಕರಡು ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದರು. ಜಿಬಿಎ ವ್ಯಾಪ್ತಿಯಲ್ಲಿ ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಪಶ್ಚಿಮ ನಗರ ಪಾಲಿಕೆಗಳು ಸೇರಿದಂತೆ ಒಟ್ಟು 05 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 369 ವಾರ್ಡ್‌ಗಳು ರಚನೆಯಾಗಿದ್ದು, ಚುನಾವಣೆಗೆ 1 ಅಕ್ಟೋಬರ್ 2025ರ ಆಧಾರವಾಗಿ ಪರಿಗಣಿಸಿ ಸಿದ್ಧಪಡಿಸಲಾದ ಕರಡು ಮತದಾರರ ಪಟ್ಟಿ ಇದಾಗಿದೆ. ಇದರಲ್ಲಿ ಒಟ್ಟು 45,69,193 ಪುರುಷರು, 43,20,583 ಮಹಿಳಾ ಮತದಾರರು ಇದ್ದಾರೆ. 1,635 ಇತರೆ ಮತದಾರರು ಸೇರಿದಂತೆ, ಒಟ್ಟು 88,91,411 ಮತದಾರರು ಇದ್ದಾರೆ ಎಂದು ಮಾಹಿತಿ ನೀಡಿದರು.

2026 ಜನವರಿ 20ರಿಂದ ಫೆಬ್ರವರಿ 3, 2026 ರವರೆಗೆ ಬೂತ್ ಲೆವಲ್ ಅಧಿಕಾರಿಗಳು (ಬಿ.ಎಲ್.ಓ) ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದು, ಈ ಅವಧಿಯಲ್ಲಿ ಹಕ್ಕು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಹಕ್ಕು ಹಾಗೂ ಆಕ್ಷೇಪಣೆಗಳ ವಿಲೇವಾರಿಯು ಫೆ.4ರಿಂದ 18ರವರೆಗೆ ನಡೆಯಲಿದೆ. ಮಾರ್ಚ್ 16ರಂದು ಅಂತಿಮ ಪಟ್ಟಿ ಬಿಡುಗಡೆ ಆಗಲಿದೆ ಎಂದರು.

> ರಾಜ್ಯದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಲು ಆಯೋಗ ಸಿದ್ಧತೆ ನಡೆಸಿಕೊಂಡಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳು ಮುಗಿದ ಬಳಿಕ ಚುನಾವಣೆ ನಡೆಸಲು ಚಿಂತನೆ ನಡೆಸಲಾಗಿದೆ. ಆದ್ದರಿಂದ ತಾತ್ಕಲಿಕವಾಗಿ ಮೇ 25ರ ನಡೆಸಲು ಚಿಂತಿಸಲಾಗಿದೆ.
>
> - ಜಿ.ಎಸ್. ಸಂಗ್ರೇಶಿ
> ಆಯುಕ್ತರು ರಾಜ್ಯ ಚುನಾವಣಾ ಆಯೋಗ

ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್ ಸಂಗ್ರೇಶಿ ಮಾತನಾಡಿ, ಜಿಬಿಎ ವ್ಯಾಪ್ತಿಯಲ್ಲಿ ಚುನಾವಣೆ ಮಾಡುವ ಸಲುವಾಗಿ ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದೆ. ಈ ಪಟ್ಟಿಯಲ್ಲಿ ನಿಮ್ಮ ಹೆಸರಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಿ. ಹೆಸರಿಲ್ಲದಿದ್ದರೆ ಕೂಡಲೆ ನಾಮನೆಯ ಮೂಲಕ ಅರ್ಜಿ ಸಲ್ಲಿಸಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿಕೊಳ್ಳುವ ಅವಕಾಶವಿದೆ. 18 ವರ್ಷಗಳಾದ ಎಲ್ಲರೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕು ಎಂದು ತಿಳಿಸಿದರು.

ನೋಂದಾಯಿತ ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ವಾರ್ಡ್‌ನ ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಲೆವಲ್ ಏಜೆಂಟ್‌ಗಳನ್ನು (ಆಬಿಎ) ನೇಮಿಸಿ, ಎಲ್ಲಾ ಅರ್ಹ ಮತದಾರರ ನೋಂದಣಿ ಕಾರ್ಯದಲ್ಲಿ ಮತಗಟ್ಟೆ ಅಧಿಕಾರಿಗಳಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ವಾರ್ಡ್ 23ರಲ್ಲಿ ಅತ್ಯಧಿಕ ಮತದಾರರು

